# PROCEEDINGS OF THE GOVERNMENT OF KARNATAKA

Sub :- Bringing in transparency and professionalism in the recruitment process of Cooperative Societies – Reg.

PREAMBLE :

The power of recruitment of personnel to various posts in the cooperative societies of the State vests with the committees of respective cooperative societies subject to the provision of Sec.128A of the Karnataka Cooperative Societies Act 1959.

It has come to the notice of the Government that recruitments in the Cooperative institutions are not being carried out as per the provisions of the Karnataka Cooperative Societies Act. 1959. Rules 1960 and the various guidelines of the Government issued in this regard including those on “reservation and roster”.

The Hon’ble Supreme Court in the case of Mohinder Sain Garg Vs State of Punjab (1991) I Supreme Court cases 662 in Para 33 of the said judgment has held that it would not be reasonable to have the percentage of the viva-voce marks more than 15% of the total marks in the selection of candidates fresh from college/school for public employment by direct recruitment where the rules provide for a composite process of selection namely written examination and interview.

The Hon’ble Supreme Court in the case of Ashok Kumar Yadav Vs state of haryana (AIR 1997 Supreme Court 454) has held that the number of candidates to be called for interview in order of the marks obtained in the written examination should not exceed twice or at the highest, thrice the number of vacancies to be filled.

Karnataka Civil Services (Direct Recruitment by Competitive Examination) (General) Rules 2001 which have come with force w.e.f. 1403 2002 are applicable to the selection of candidates to Group A, Group B, Group C and Group D posts. These rules provide for conducting written tests for 200 marks with two papers and there is no provision for holding interviews.

It is considered necessary to ensure that the recruitment process in cooperative institutions is conducted in a transparent and professional manner. Therefore it has become necessary to issue directions to all the Cooperative Societies in the state under section 30B(I) of the Karnataka Cooperative Societies Act 1959 in the interest of securing transparency and professionalism in the process of recruitment of personnel to various posts in the services of the Cooperative Societies.

Hence this order.

**GOVERNMENT ORDER NO.CMW 15 CLM 05, BANGALORE DATED 03-02-2005**

In the circumstances stated in the preamble, the Government in exercise of the powers vested under sub section (1) of section 30B of the Karnataka Cooperative Societies Act 1959, hereby issues the following directions to all the Cooperative Societies of the State to ensure that the recruitment process is conducted in a transparent and professional manner.

1. The provisions of Rules 17 and 18 of the KCS Rules, 1960 shall be complied with
2. The posts intended to be filled up must necessarily be those approved by the authorities as per Rule 17 of the Karnataka Cooperative societies Rules 1960.
3. Qualification for a post shall be prescribed considering the job requirements of the post subject to the provisions of Rules 17 of the Karnataka Cooperative Societies Rules 1960.
4. Preference shall be given to persons having qualification and experience in cooperation.
5. The prescribed age limit for the various posts shall be strictly adhered to as per Rule 18 of KCS Rules 1960.
6. Vacancies shall be notified in at least two leading dailies having circulation in the area where the cooperative society is situated of which at least one shall be a Kannada daily and the details of number of posts minimum qualification the scale of pay and allowances, age limit reservation if any shall be clearly specified in the notification.
7. The “Roster system” to the extent applicable to the cooperative societies shall be strictly adhered to
8. The written test shall consist of Kannada Language, General English, General Knowledge and the concerned subject for recruitment to the

posts of Typist and Stenographers, proficiency tests shall be done and for recruitment of drivers, driving test shall be done.

9. The conduct of written test and valuation shall be carried out by an outside professional agency like National Institute of Banking Management. Poona State Bank of My sore Staff Training institute, Bangalore, Canara Bank Staff Training Institute Bangalore, Indian Institute of Management Bangalore Regional Institute of Cooperative Management, Bangalore etc,.
10. If the process involves both written test and interview, the number of candidates successful in the written test to be called for the interview shall not be more than five times the number of posts. If the process involves only the interview stage, the number of candidates to be called for the interview shall not be more than five times the number of posts in which case, the criteria for selection of such candidates for the interview shall be determined on the basis of the percentage of marks obtained in the qualifying examination.
11. For recruitment to posts of Second Division Assistants and above the candidates shall be called for written test in the Ratio of 1:10 based on the percentage of marks obtained in the qualifying exams prescribed for the posts. The marks to be allotted for the written test may be as follows, Kannada Language – 50 marks, General English-25 marks, General Knowledge-25 marks and the concerned subject-100 marks.
12. For recruitment to the posts of Group-D services, a Kannada Test for 30 marks shall be held to ensure literacy to the extent of reading and writing Kannada. The candidates successful in the Kannada Test shall be called for interview in the ratio 1:5.
13. The candidates shall be called for interview in the ratio of 1:5 on the basis of percentage of marks obtained in the written tests or qualifying exams prescribed for those posts. The percentage of marks obtained in the written test or qualifying exam shall be reduced to 85% and the interview shall carry 15 marks.
14. Selection can also be made without any interview based on the merit obtained in the written test or qualifying exam prescribed.
15. No recruitments shall be made during the last three months before the expiry of the term of the committee of any cooperative society.
16. Each society shall have a recruitment authority for the purpose of selection of candidates as follows:

| | | |
|---|---|---|
| 1. | The Chairman of the Society | Chairman |
| 2. | Not more than two Directors to be elected by the Committee (one among them may be Vice Chairman if any) | Member |
| 3. | Registrar of CS or his nominee | Member |
| 4. | Chief Executive of the Society | Member convener |

However, the recruitment committees constituted as per order / direction Nos.

1) No.RSR 147 XMA 91-92 DTD 06-08-1991
2) No.RSR 267 XMA 91-92 DTD 21-10-1991
3) No.RSR 249 XMA 92-93 DTD 13-10-1993 (Direction No.10) and Circular Nos.

1) No.RSR 221 XMC 92-93 DTD 17-10-1992
2) No.RSR 221 XMC 92-93 DTD 21-11-1992 of the Registrar of Cooperative Societies shall continue to be in force.

No meeting of the recruitment authority shall be held without the presence of either the Registrar of Cooperative Societies or his nominee.

17. The Chief Executive of the Society shall make all arrangements to conduct the process of recruitment and selection.

By order and in the name of
Governor of Karnataka

(R.S.HUCHACHARY)
Officer on Special Duty,
Cooperation Department.

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿಅಸ್ಕರ್ ರಸ್ತೆ, ಬೆಂಗಳೂರು-52**

ಸಸಂಅನಿ(ಕೈಸಸಂ)/ಹ.ದು/42/2007-08 ದಿನಾಂಕ:21-06-2007

-: ಸುತ್ತೋಲೆ :-

ವಿಷಯ :- ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾದ ಪ್ರಕರಣಗಳಲ್ಲಿ ಅನುಪಾಲನಾ ಕ್ರಮವಿಡುವ ಹಾಗೂ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ.

ಉಲ್ಲೇಖ :- ಕರ್ನಾಟಕ ಸರ್ಕಾರ ಪತ್ರ ಸಂಖ್ಯೆ:ಸಇ/92/ಸಿಎಲ್‌ಎಂ/2007, ದಿನಾಂಕ:17-4-2007.

*******

ಸಹಕಾರ ಸಂಘಗಳಲ್ಲಿ ಆಗುವ ಹಣ ದುರುಪಯೋಗ ಹಾಗೂ ಲೆಕ್ಕ ಪರಿಶೋಧನಾ ವೇಳೆಯಲ್ಲಿ ವರದಿಯಲ್ಲಿ ಕಂಡು ಬರುವ ಲೋಪದೋಷಗಳು, ನ್ಯೂನ್ಯತೆಗಳನ್ನು ಸರಿಪಡಿಸುವ ದಿಶೆಯಲ್ಲಿ ತೆಗೆದುಕೊಳ್ಳಬೇಕಾದ ಅನುಸರಣಾ ಕ್ರಮಗಳನ್ನು ಸಕಾಲದಲ್ಲಿ ಹಾಗೂ ಪರಿಣಾಮಕಾರಿಯಾಗಿ ಕೈಗೊಳ್ಳುತ್ತಿಲ್ಲವೆಂದು ವಿಧಾನಮಂಡಳದ ಒಳಗೆ ಹಾಗೂ ಹೊರಗೆ ಬಹು ಚರ್ಚಿತವಾಗುತ್ತಿದೆ. ಈ ವಿಷಯದಲ್ಲಿ ಸಹಕಾರ ಇಲಾಖಾಧಿಕಾರಿಗಳು ಮೂಕ ಪ್ರೇಕ್ಷಕರೆಂಬ ಆರೋಪಗಳು ಕೇಳಿ ಬರುತ್ತಿವೆ. ಮಹಾಲೇಖಪಾಲರು ಸಹ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 63(9) ಕಟ್ಟುನಿಟ್ಟಾಗಿ ಅನುಷ್ಠಾನಗೊಳ್ಳದಿರುವ ಕುರಿತು ಅವಲೋಕಿಸಿ ಈ ಕಲಂನ ಅವಕಾಶದ ರೀತ್ಯ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡು ಬರುವ ಲೋಪದೋಷಗಳನ್ನು ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸುವ ಬಗ್ಗೆ ಸರ್ಕಾರಕ್ಕೆ ಅರ್ಧವಾರ್ಷಿಕ ವರದಿಗಳನ್ನು ಸಲ್ಲಿಸುತ್ತಿಲ್ಲವೆಂಬುದನ್ನು ಗಮನಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಉಲ್ಲೇಖದ ಪತ್ರದಲ್ಲಿ ಕಲಂ 63(9)ನ್ನು ಸೂಕ್ತ ಹಾಗೂ ಕಟ್ಟುನಿಟ್ಟಿನ ಪಾಲನೆಗೆ ಕ್ರಮ ಕೈಗೊಳ್ಳಲು ಸೂಚಿಸಿದೆ.

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ನಿಮ್ಮ ನಿಮ್ಮ ಪ್ರತ್ಯಾಯೋಜನೆಯಡಿ ಬರುವ ಸಹಕಾರ ಸಂಘಗಳ ಎಲ್ಲ ಲೆಕ್ಕ ಪರಿಶೋಧನಾ ವರದಿಗಳನ್ನು ಪರಿಶೀಲಿಸಿ ಯಾವ ಯಾವ ವರ್ಷದಲ್ಲಿ ನ್ಯೂನ್ಯತೆಗಳು, ದುರುಪಯೋಗಗಳು ಇವೆಯೋ ಅಂತಹವುಗಳ ಸಂಖ್ಯೆ/ಮೊತ್ತ/ಇತರೆಗಳನ್ನು ಸರಿಪಡಿಸಿಕೊಂಡಿದ್ದಾರೆಯೇ, ಇಲ್ಲವೇ, ಸರಿಪಡಿಸಿಕೊಂಡಿದ್ದಲ್ಲಿ ಅವುಗಳ ಸಂಖ್ಯೆ, ಈ ಬಗ್ಗೆ ತೆಗೆದುಕೊಂಡ ಕ್ರಮ, ಸಂಘಗಳ ಬಗ್ಗೆ ವಿವರಗಳನ್ನು ಪ್ರತಿ ತ್ರೈಮಾಸಿಕದ ವರದಿಯನ್ನು 10ನೇ ತಾರೀಖಿನೊಳಗಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ಈ ರೀತಿ ಸಲ್ಲಿಸಲಾಗುವ ವರದಿಗಳನ್ನು ವ್ಯವಸ್ಥಿತವಾಗಿ ಪರಿಶೀಲಿಸಿ, ಪರಾಮರ್ಶಿಸಿ ವಸ್ತುನಿಷ್ಠೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕೇಂದ್ರ ಕಛೇರಿಯ ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕಾ ಸಹಕಾರ ಸಂಘಗಳು) ಇವರಿಗೆ ಪ್ರತ್ಯಾಯೋಜಿಸಲಾಗಿದೆ.

ಆದ್ದರಿಂದ ಇನ್ನು ಮುಂದೆ ಈ ವಿಷಯದಲ್ಲಿ ವಿಳಂಬ ಹಾಗೂ ನಿರ್ಲಕ್ಷ್ಯ ತೋರದಿರಲು ಸೂಚಿಸಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು
(ಕೈಗಾರಿಕಾ ಸಹಕಾರ ಸಂಘಗಳು)

# ಕರ್ನಾಟಕ ಸರ್ಕಾರ

ಸಂಖ್ಯೆ:ಸಿಒ/261/ಸಿಎಲ್‌ಎಂ/2007 (ಪಿ–1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:24–8–2007

ತಿದ್ದುಪಡಿ ಆದೇಶ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30ಬಿ(1)ರ ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಸರ್ಕಾರದ ಆದೇಶ ಸಂಖ್ಯೆ: ಸಿಒ 15 ಸಿಎಲ್‌ಎಂ 2005 ದಿನಾಂಕ:3–2–2005ರ ಆದೇಶ ಭಾಗದಲ್ಲಿ ನಿರ್ದೇಶನ 18 ಅನ್ನು ಕೆಳಕಂಡಂತೆ ಸೇರಿಸಿದ್ದು ಅದರಂತೆ ಓದಿಕೊಳ್ಳತಕ್ಕದ್ದು.

"18 ಪಾರದರ್ಶಕ ನೇಮಕಾತಿ ಪ್ರಕ್ರಿಯೆಯನ್ನು ರೂಪಿಸಿ ನಿಬಂಧಕರಿಂದ ಅನುಮೋದನೆ ಪಡೆದಂತಹ ಸರ್ಕಾರದ ಧನಸಹಾಯರಹಿತ ಸಹಕಾರ ಸಂಘಗಳಿಗೆ ಮತ್ತು ಕರ್ನಾಟಕ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ., ಬೆಂಗಳೂರು ಇದಕ್ಕೆ ಈ ನಿರ್ದೇಶನಗಳು ಅನ್ವಯವಾಗತಕ್ಕದ್ದಲ್ಲ"

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಒ/41/ಸಿಎಲ್‌ಎಂ/2007

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:24-8-2007

ತಿದ್ದುಪಡಿ ಆದೇಶ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30ಬಿ(1) ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ತರುವ ಬಗ್ಗೆ ಸರ್ಕಾರವು ಹೊರಡಿಸಿರುವ ಆದೇಶದ ಸಂಖ್ಯೆ:ಸಿಎಂಡಬ್ಲ್ಯೂ 15 ಸಿಎಲ್‌ಎಂ 2005 ದಿನಾಂಕ:30-6-2005 ಮತ್ತು 18-10-2005 ಅನ್ನು ಹಿಂತೆಗೆದುಕೊಳ್ಳಲಾಗಿರುತ್ತದೆ ಹಾಗೂ ಆದೇಶ ಸಂಖ್ಯೆ:ಸಿಒ 15 ಸಿಎಲ್‌ಎಂ 2005 ದಿನಾಂಕ 3-2-2005ರ ಆದೇಶ ಭಾಗದ ನಿರ್ದೇಶನದ ಸಂಖ್ಯೆ:16ನ್ನು ಭಾಗಶ: ಮಾರ್ಪಡಿಸಿ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ ನಿ, ಬೆಂಗಳೂರು (ಕೆ.ಎಂ.ಎಫ್) ಮತ್ತು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟಗಳ ಬೈಲಾಗಳನ್ವಯ ನೌಕರರ ನೇಮಕಾತಿ, ಪದೋನ್ನತಿ ಮತ್ತು ವೃಂದಬಲ ಇತ್ಯಾದಿಗಳನ್ನು ನಿರ್ಧರಿಸಲು ರಚಿಸಲಾದ ತಜ್ಞಕೂಟ ಸಮಿತಿಗಳೇ ನೇಮಕಾತಿ ಸಮಿತಿಗಳೆಂದು ಪರಿಗಣಿಸತಕ್ಕದ್ದು ಎಂದು ಆದೇಶಿಸಲಾಗಿದೆ ಮತ್ತು ಅದರಂತೆ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಒ/61/ಸಿಎಲ್‌ಎಂ/2007

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:16-4-2007

ತಿದ್ದುಪಡಿ ಆದೇಶ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30ಬಿ(1) ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಸರ್ಕಾರದ ಆದೇಶ ಸಂಖ್ಯೆ:ಸಿಒ 15 ಸಿಎಲ್‌ಎಂ 2005 ದಿನಾಂಕ:3-2-2005ರ ಆದೇಶ ಭಾಗದ ನಿರ್ದೇಶನ ಸಂಖ್ಯೆ:11ರಲ್ಲಿ "ಶೇಕಡಾವಾರು ಅಂಕಗಳ ಆಧಾರದ ಮೇಲೆ 1:10ರ ಅನುಪಾತದಲ್ಲಿ" ಎಂಬ ಪದಗಳಿಗೆ ಮತ್ತು ಅಂಕಿಗಳಿಗೆ ಬದಲಾಗಿ "ಶೇಕಡಾವಾರು ಅಂಕಗಳ ಆಧಾರದ ಮೇಲೆ ಕನಿಷ್ಠ ಪಕ್ಷ 1:10ರ ಅನುಪಾತದಲ್ಲಿ" ಎಂಬ ಪದಗಳನ್ನು ಮತ್ತು ಅಂಕಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಈ ತಿದ್ದುಪಡಿಯನ್ನು ಸೇರಿಸಿಕೊಂಡು ನಿರ್ದೇಶನ ಸಂಖ್ಯೆ 11ನ್ನು ಓದಿಕೊಳ್ಳತಕ್ಕದ್ದು ಎಂದು ಆದೇಶಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

## ಕರ್ನಾಟಕ ಸರ್ಕಾರ

ಸಂಖ್ಯೆ:ಸಿಎಂಡಬ್ಲ್ಯೂ/15/ಸಿಎಲ್ಎಂ/2005

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:3-8-2006

ತಿದ್ದುಪಡಿ ಆದೇಶ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30 ಬಿ(1) ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಸರ್ಕಾರದ ಆದೇಶ ಸಂಖ್ಯೆ: ಸಿಓ 15 ಸಿಎಲ್ಎಂ 2005 ದಿನಾಂಕ:3-2-2005ರ ಆದೇಶ ಭಾಗದ ನಿರ್ದೇಶನ ಸಂಖ್ಯೆ:13ನ್ನು ಭಾಗಶ: ಮಾರ್ಪಡಿಸಿ ಕೆಳಕಂಡಂತೆ ತಿದ್ದುಪಡಿ ಮಾಡಿದ್ದು ಅದರಂತೆ ಓದಿಕೊಳ್ಳತಕ್ಕದ್ದು ಎಂದು ಆದೇಶಿಸುತ್ತದೆ.

"ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಗಳಿಸಿದ ಅಥವಾ ಹುದ್ದೆಗಳಿಗೆ ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳ ಅಧಾರದ ಮೇಲೆ ಅಭ್ಯರ್ಥಿಗಳನ್ನು 1:5ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯತಕ್ಕದ್ದು. ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕವನ್ನು ಅಥವಾ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕವನ್ನು ಶೇಕಡಾ 75ರಷ್ಟಕ್ಕೆ ಇಳಿಸಿ, ಉಳಿದ 25 ಅಂಕಗಳನ್ನು ಸಂದರ್ಶನಕ್ಕೆ ಇಡತಕ್ಕದ್ದು"

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

# ಕರ್ನಾಟಕ ಸರ್ಕಾರ

ಸಂಖ್ಯೆ:ಸಿಎಂಡಬ್ಲ್ಯೂ/15/ಸಿಎಲ್ಎಂ/2005

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 18-10-2005

## ತಿದ್ದುಪಡಿ ಆದೇಶ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30ಬಿ(1) ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಸಹಕಾರ ಸಂಘಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆ ತರುವ ಬಗ್ಗೆ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ:ಸಿಓ 15 ಸಿಎಲ್ಎಂ 2005 ದಿನಾಂಕ:30-6-2005 ಅನ್ನು ಭಾಗಶ: ಮಾರ್ಪಡಿಸಿ, ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟಗಳು ಈ ಕೆಳಕಂಡಂತೆ ನೇಮಕಾತಿ ಸಮಿತಿಯನ್ನು ಹೊಂದಿರತಕ್ಕದ್ದು ಎಂದು ಪುನರ್‌ರಚಿಸಿ ಆದೇಶಿಸುತ್ತದೆ ಮತ್ತು ಅದರಂತೆ ಓದಿಕೊಳ್ಳತಕ್ಕದ್ದು.

ಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟ

| | |
|---|---|
| 1) ಒಕ್ಕೂಟದ ಅಧ್ಯಕ್ಷರು | ಅಧ್ಯಕ್ಷರು |
| 2) ಎನ್‌ಡಿಡಿಬಿ ಪ್ರತಿನಿಧಿ | ಸದಸ್ಯರು |
| 3) ಕೆ ಎಂ ಎಫ್ ಪ್ರತಿನಿಧಿ | ಸದಸ್ಯರು |
| 4) ಸಂಬಂಧಪಟ್ಟ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು | ಸದಸ್ಯರು |
| 5) ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು. | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಎಂಡಬ್ಲ್ಯೂ/15/ಸಿಎಲ್‌ಎಂ/2005

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:26–5–2005

ಸೇರ್ಪಡೆ ಆದೇಶ

ಸರ್ಕಾರದ ಆದೇಶ ಸಂಖ್ಯೆ:ಸಿಎಂ ಡಬ್ಲ್ಯೂ 15 ಸಿಎಲ್‌ಎಂ 2005 ದಿನಾಂಕ:3–2–2005 ರಲ್ಲಿ ಆದೇಶ ಭಾಗದ ಕಂಡಿಕೆ 16ರಲ್ಲಿ ಆದೇಶಗಳ ಕ್ರಮ ಸಂಖ್ಯೆ:5ರ ನಂತರ ಆದೇಶ ಕ್ರಮ ಸಂಖ್ಯೆ.6ನ್ನು ಈ ಕೆಳಕಂಡಂತೆ ಸೇರ್ಪಡೆ ಮಾಡಲಾಗಿರುತ್ತದೆ ಮತ್ತು ಅದರಂತೆ ಓದಿಕೊಳ್ಳತಕ್ಕದ್ದು.

"06 ಆದೇಶ ಸಂಖ್ಯೆ:ಆರ್‌ಎಸ್‌ಆರ್/247/ಎಕ್ಸ್‌ಎಂಸಿ/86–87 ದಿನಾಂಕ:5–12–1986.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ :- ಸಹಕಾರ ಸಂಘಗಳ ನೇಮಕಾತಿ ಪ್ರಕ್ರಿಯೆಯಲ್ಲಿ
ಪಾರದರ್ಶಕತೆ ಮತ್ತು ವೃತ್ತಿಪರತೆ ತರುವ ಬಗ್ಗೆ.

*******

ಪ್ರಸ್ತಾವನೆ:

ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಪ್ರಕರಣ 128ಎ ದ ಉಪಬಂಧಗಳಿಗೆ ಒಳಪಟ್ಟು ಸಹಕಾರ ಸಂಘಗಳಲ್ಲಿನ ವಿವಿಧ ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಅಧಿಕಾರವು ಆಯಾ ಸಹಕಾರ ಸಂಘಗಳ ಆಡಳಿತ ಸಮಿತಿಗಳಿಗೆ ಇರುತ್ತದೆ.

ಸಿಬ್ಬಂದಿ ನೇಮಕಾತಿ ಮಾಡುವಾಗ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ನಿಯಮಗಳು 1960ರ ಉಪಬಂಧಗಳನ್ನು ಪಾಲನೆ ಮಾಡದಿರುವುದು ಮತ್ತು ಈ ನಿಟ್ಟಿನಲ್ಲಿ ಮೀಸಲಾತಿ ನಿಯಮಗಳನ್ನು ಒಳಗೊಂಡಂತೆ ಕಾಲಕಾಲಕ್ಕೆ ಸರ್ಕಾರವು ನೀಡಿರುವ ಹಲವಾರು ನಿರ್ದೇಶನಗಳನ್ನು ಪಾಲನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯವು ಸಿಬ್ಬಂದಿ ನೇಮಕಾತಿ ವಿಷಯದಲ್ಲಿ ಈ ರೀತಿ ತೀರ್ಪು ನೀಡಿರುತ್ತದೆ.

"The Hon'ble Supreme Court in the case of Mohinder Sain Garg Vs State of Punjab (1991) I Supreme Court cases 662 in Para 33 of the said judgments has held that it would not be reasonable to have the percentage of the viva-voce marks more than 15% of the total marks in the selection of candidates fresh from college/school for public employment by direct recruitment where the rules provide for a composite process of selection namely written examination and interview.

The Hon'ble Supreme Court in the case of Ashok Kumar yadav Vs State of Haryana (AIR 1997 Supreme Court 454) has held that the number of candidates to be called for interview in order of the marks obtained in the written examination should not exceed twice or, at the highest, thrice the number of vacancies to be filled".

ದಿನಾಂಕ:14-3-2002ರಿಂದ ಜಾರಿಗೆ ಬಂದಿರುವ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ)(ಸಾಮಾನ್ಯ) ನಿಯಮಗಳು 2001 ಸರ್ಕಾರಿ ಸೇವೆಯಲ್ಲಿನ ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಅನ್ವಯವಾಗುತ್ತದೆ. ಈ ನಿಯಮಗಳಲ್ಲಿ 200 ಅಂಕಗಳ ಎರಡು ಪತ್ರಿಕೆಗಳುಳ್ಳ ಲಿಖಿತ ಪರೀಕ್ಷೆಗೆ ಅವಕಾಶವಿರುತ್ತದೆ ಮತ್ತು ಮೌಖಿಕ ಸಂದರ್ಶನಕ್ಕೆ ಅವಕಾಶವಿರುವುದಿಲ್ಲ.

ಸಹಕಾರ ಸಂಘಗಳಿಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆ ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ಪಾಲಿಸುವುದು ಅತಿ ಅವಶ್ಯಕತೆಯೆಂದು ಪರಿಗಣಿಸಲಾಗಿದೆ. ಆದುದರಿಂದ ಸಹಕಾರ ಸಂಘಗಳಲ್ಲಿನ ಸೇವೆಗಳಲ್ಲಿನ ವಿವಿಧ ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ಪಾಲಿಸಿ ನೇಮಕಾತಿ ಮಾಡಿಕೊಳ್ಳಲು ರಾಜ್ಯದ ಎಲ್ಲಾ ಸಹಕಾರಿ ಸಂಘಗಳು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1956ರ ಪ್ರಕರಣ 30ಬಿ(1) ಅಡಿಯಲ್ಲಿ ಅವಕಾಶ ನೀಡುವುದು ಸೂಕ್ತವಾಗಿರುತ್ತದೆ.

ಆದುದರಿಂದ ಈ ಕೆಳಕಂಡ ಆದೇಶ ಹೊರಡಿಸಿದೆ.

**ಆದೇಶ ಸಂ:ಸಿಓ 15 ಸಿಎಲ್ಎಂ 2005 ಬೆಂಗಳೂರು ದಿನಾಂಕ:3-2-2005**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1956 ಪ್ರಕರಣ 30ಬಿ(1) ಅಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿ , ರಾಜ್ಯದ ಎಲ್ಲಾ ಸಹಕಾರ ಸಂಘಗಳ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವೃತ್ತಿಪರತೆಯನ್ನು ಪಾಲಿಸುವ ಹಿತದೃಷ್ಟಿಯಿಂದ ಈ ಕೆಳಕಂಡಂತೆ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸರ್ಕಾರವು ನಿರ್ದೇಶನ ನೀಡಿದೆ.

1) ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 17 ಮತ್ತು 18ನ್ನು ಪಾಲಿಸತಕ್ಕದ್ದು.
2) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 17ರ ಅಡಿಯಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ ಮಂಜೂರು ಮಾಡಿಸಿಕೊಂಡು ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳತಕ್ಕದ್ದು,
3) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 17 ಅಡಿಯಲ್ಲಿ ಅವಕಾಶವಿರುವಂತೆ ಆಯಾ ಹುದ್ದೆಗಳಿಗೆ ನಿರ್ಧಿಷ್ಟವಾದ ವಿದ್ಯಾರ್ಹತೆಯನ್ನು ನಿಗಧಿಪಡಿಸತಕ್ಕದ್ದು,
4) ಸಹಕಾರ ವಿಷಯದಲ್ಲಿ ವಿದ್ಯಾರ್ಹತೆ ಮತ್ತು ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆಧ್ಯತೆ ನೀಡತಕ್ಕದ್ದು.
5) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 18ರ ಅಡಿಯಲ್ಲಿ ಅವಕಾಶವಿರುವಂತೆ ವಯೋಮಿತಿಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
6) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸಂಘದ ಕಾರ್ಯಕ್ಷೇತ್ರಕ್ಕೆ ಒಳಪಡುವ ಕನಿಷ್ಟ ಎರಡು ಸ್ಥಳೀಯ ಮುಖ್ಯ ದಿನಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು, ಇವುಗಳಲ್ಲಿ ಒಂದು ಪ್ರಕಟಣೆ ಕನ್ನಡ ದಿನಪತ್ರಿಕೆಯಲ್ಲಿ ಇರತಕ್ಕದ್ದು, ಪ್ರಕಟಣೆಯಲ್ಲಿ ಭರ್ತಿ ಮಾಡುವ ಹುದ್ದೆಗಳ ಸಂಖ್ಯೆ ಕನಿಷ್ಟ ವಿದ್ಯಾರ್ಹತೆ, ವೇತನ ಮತ್ತು ಭತ್ಯೆ, ವಯೋಮಿತಿ ಹಾಗೂ ಮೀಸಲಾತಿ ಇತ್ಯಾದಿ ವಿವರಗಳನ್ನು ಪ್ರಕಟಣೆಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.
7) ಮೀಸಲಾತಿ ನಿಯಮಗಳನ್ನು ಸಹಕಾರ ಸಂಘಗಳಿಗೆ ಅನ್ವಯವಾಗುವಷ್ಟರ ಮಟ್ಟಿಗೆ ಕಡ್ಡಾಯವಾಗಿ ಪಾಲಿಸತಕ್ಕದ್ದು.

8) ಹುದ್ದೆಗಳನ್ನು ಭರ್ತಿ ಮಾಡುವಾಗ ಕನ್ನಡ ಭಾಷೆ, ಆಂಗ್ಲ ಭಾಷೆ ಸಾಮಾನ್ಯ ಜ್ಞಾನ ಮತ್ತು ಸಂಬಂಧಿಸಿದ ವಿಷಯಕ್ಕೆ ಲಿಖಿತ ಪರೀಕ್ಷೆ ನಡೆಸತಕ್ಕದ್ದು, ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಹುದ್ದೆಗಳಿಗೆ ಪ್ರವೀಣತಾ ಪರೀಕ್ಷೆ ನಡೆಸತಕ್ಕದ್ದು ಹಾಗೆಯೇ ವಾಹನ ಚಾಲಕರಿಗೆ ವಾಹನ ಚಾಲನಾ ಪರೀಕ್ಷೆ ನಡೆಸತಕ್ಕದ್ದು.

9) ಲಿಖಿತ ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್, ಪೂನಾ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ಟಾಫ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು ಕೆನರಾ ಬ್ಯಾಂಕ್ ಸ್ಟಾಫ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು, ಇಂಡಿಯನ್ ಇನ್ಸಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು, ರೀಜನಲ್ ಇನ್ಸಸ್ಟಿಟ್ಯೂಟ್ ಆಫ್ ಕೋ ಅಪರೇಟಿವ್ ಮ್ಯಾನೇಜ್‌ಮೆಂಟ್,ಬೆಂಗಳೂರು ಮುಂತಾದ ವೃತ್ತಿಪರತೆಯುಳ್ಳ ಏಜೆನ್ಸಿಗಳಿಂದ ನಡೆಸತಕ್ಕದ್ದು.

10) ನೇಮಕಾತಿ ಪ್ರಕ್ರಿಯೆಯು ಲಿಖಿತ ಪರೀಕ್ಷೆ ಮತ್ತು ಸಂದರ್ಶನ ಒಳಗೊಂಡಿದ್ದಲ್ಲಿ, ಲಿಖಿತ ಪರೀಕ್ಷೆಯಲ್ಲಿ ಅರ್ಹತೆಗಳಿಸಿ ಸಂದರ್ಶನಕ್ಕೆ ಕರೆಯಬೇಕಾದ ಅಭ್ಯರ್ಥಿಗಳ ಸಂಖ್ಯೆಯು ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಸಂಖ್ಯೆಯ 5 ಪಟ್ಟುಗೆ ಮೀರತಕ್ಕದ್ದಲ್ಲ. ನೇಮಕಾತಿ ಪ್ರಕ್ರಿಯೆಯು ಕೇವಲ ಸಂದರ್ಶನವನ್ನು ಒಳಗೊಂಡಿದ್ದಲ್ಲಿ, ಸಂದರ್ಶನಕ್ಕೆ ಕರೆಯಬೇಕಾದ ಅಭ್ಯರ್ಥಿಗಳನ್ನು ನಿಗಧಿಪಡಿಸಿದ ವಿದ್ಯಾರ್ಹತೆ ಪರೀಕ್ಷೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಆಧಾರದ ಮೇಲೆ ಆಯ್ಕೆಮಾಡತಕ್ಕದ್ದು ಮತ್ತು ಅಂತಹ ಅಭ್ಯರ್ಥಿಗಳ ಸಂಖ್ಯೆಯು ಭರ್ತಿಮಾಡಬೇಕಾದ ಖಾಲಿ ಹುದ್ದೆಗಳ ಸಂಖ್ಯೆಯ 5 ಪಟ್ಟುಗೆ ಮೀರತಕ್ಕದ್ದಲ್ಲ.

11) ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆ ಮತ್ತು ಅದಕ್ಕಿಂತ ಮೇಲ್ಪಟ್ಟ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವಾಗ ಹುದ್ದೆಗಳಿಗೆ ನಿಗಧಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಆಧಾರದ ಮೇಲೆ 1:10ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಕರೆಯತಕ್ಕದ್ದು. ಲಿಖಿತ ಪರೀಕ್ಷೆಯಲ್ಲಿ ಕನ್ನಡ ಬಾಷೆಗೆ–50 ಅಂಕಗಳು ಆಂಗ್ಲ ಬಾಷೆಗೆ–25 ಅಂಕಗಳು, ಸಾಮಾನ್ಯ ಜ್ಞಾನಕ್ಕೆ–25 ಅಂಕಗಳು ಮತ್ತು ಸಂಬಂಧಿಸಿದ ವಿಷಯಕ್ಕೆ–100 ಅಂಕಗಳನ್ನು ನಿಗಧಿಪಡಿಸತಕ್ಕದ್ದು.

12) ಗ್ರೂಪ್–ಡಿ ಸೇವೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಕನ್ನಡ ಓದುವ ಮತ್ತು ಬರೆಯುವ ಸಾಮರ್ಥ್ಯವನ್ನು ಖಾತ್ರಿಪಡಿಸಿಕೊಳ್ಳಲು 30 ಅಂಕಗಳ ಕನ್ನಡ ಪರೀಕ್ಷೆ ನಡೆಸತಕ್ಕದ್ದು. ಕನ್ನಡ ಪರೀಕ್ಷೆಯಲ್ಲಿ ಅರ್ಹತೆ ಗಳಿಸಿದ ಅಭ್ಯರ್ಥಿಗಳನ್ನು 1:5ರ ಅನುಪಾತದಲ್ಲಿ ಸಂದರ್ಶನ ನಡೆಸಿ ಆಯ್ಕೆ ಮಾಡತಕ್ಕದ್ದು.

13) ಲಿಖಿತ ಪರೀಕ್ಷೆಯಲ್ಲಿ ಅರ್ಹತೆಗಳಿಸಿದ ಅಥವಾ ಹುದ್ದೆಗಳಿಗೆ ನಿಗಧಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು 1:5ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯತಕ್ಕದ್ದು. ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕವನ್ನು ಅಥವಾ ಅರ್ಹತೆ ಪರೀಕ್ಷೆಯಲ್ಲಿ ಗಳಿಸಿದ ಅಂಕವನ್ನು ಶೇಕಡ 85ರಷ್ಟಕ್ಕೆ ಇಳಿಸಿ, ಉಳಿದ 15 ಅಂಕಗಳನ್ನು ಸದರ್ಶನಕ್ಕೆ ಇಡತಕ್ಕದ್ದು.

14) ಸಂದರ್ಶನ ನಡೆಸದೇ ಆಯಾ ಹುದ್ದೆಗಳಿಗೆ ನಿಗಧಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಅಥವಾ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಅರ್ಹತೆಯ ಆಧಾರದ ಮೇಲೆ ನೇಮಕಾತಿಗಳನ್ನು ಮಾಡಬಹುದು.

15) ಯಾವುದೇ ಸಹಕಾರ ಸಂಘದ ಆಡಳಿತ ಸಮಿತಿಯ ಪದಾವಧಿ ಮುಕ್ತಾಯ ಪೂರ್ವದ ಕೊನೆಯ ಮೂರು ತಿಂಗಳ ಅವಧಿಯಲ್ಲಿ ಯಾವುದೇ ನೇಮಕಾತಿಗಳನ್ನು ಮಾಡತಕ್ಕದ್ದಲ್ಲ.

16) ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಪ್ರತಿ ಸಂಘವು ಈ ಕೆಳಕಂಡಂತೆ ಒಂದು ನೇಮಕಾತಿ ಸಮಿತಿಯನ್ನು ಹೊಂದಿರತಕ್ಕದ್ದು.

| | |
|---|---|
| 1. ಸಂಘದ ಅಧ್ಯಕ್ಷರು | – ಅಧ್ಯಕ್ಷರು |
| 2. ಆಡಳಿತ ಸಮಿತಿಯಲ್ಲಿ ಆಯ್ಕೆ ಮಾಡಿಕೊಂಡ ಇಬ್ಬರು ನಿರ್ದೇಶಕರು (ಇವರಲ್ಲಿ ಒಬ್ಬರು ಉಪಾಧ್ಯಕ್ಷರು ಇದ್ದಲ್ಲಿ) | – ಸದಸ್ಯರು |
| 3. ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ. | – ಸದಸ್ಯರು |
| 4. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ | –ಸಂಚಾಲಕ ಸದಸ್ಯರು. |

ಆದಾಗ್ಯೂ ಸಹಕಾರ ಸಂಘಗಳ ನಿಬಂಧಕರು ಹೊರಡಿಸಿರುವ ಈ ಕೆಳಕಂಡ ಸುತ್ತೋಲೆಗಳ/ ಆದೇಶ/ನಿರ್ದೇಶನಗಳನ್ವಯ ರಚಿಸಿರುವ ನೇಮಕಾತಿ ಸಮಿತಿಗಳು ಮುಂದುವರೆಯುತ್ತವೆ.

1) ಆದೇಶ ಸಂ.ಆರ್‌ಎಸ್‌ಆರ್ 147 ಎಕ್ಸ್‌ಎಂಎ 91–92, ದಿನಾಂಕ 06–08–1991
2) ಆದೇಶ ಸಂ.ಆರ್‌ಎಸ್‌ಆರ್ 267 ಎಕ್ಸ್‌ಎಂಎ 91–92, ದಿನಾಂಕ 21–10–1991
3) ಆದೇಶ ಸಂ.ಆರ್‌ಎಸ್‌ಆರ್ 249 ಎಕ್ಸ್‌ಎಂಎ 92–93, ದಿನಾಂಕ 13–10–1993 (ನಿರ್ದೇಶನ ಸಂಖ್ಯೆ:10)
4) ಸುತ್ತೋಲೆ ಸಂ. ಆರ್‌ಎಸ್‌ಆರ್ 221 ಎಕ್ಸ್‌ಎಂಸಿ 92–93, ದಿನಾಂಕ 17–10–1992.
5) ಸುತ್ತೋಲೆ ಸಂ.ಆರ್‌ಎಸ್‌ಆರ್ 221 ಎಕ್ಸ್‌ಎಂಸಿ 92–93, ದಿನಾಂಕ 21–11–1992.

ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿ ಇಲ್ಲದೆ ನೇಮಕಾತಿ ಸಮಿತಿಯ ಸಭೆಯನ್ನು ನಡೆಸತಕ್ಕದ್ದಲ್ಲ.

17. ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯು ನೇಮಕಾತಿ ಪ್ರಕ್ರಿಯೆ ಮತ್ತು ಆಯ್ಕೆಗೆ ಸಂಬಂಧಿಸಿದಂತೆ ಎಲ್ಲ ವ್ಯವಸ್ಥೆಗಳನ್ನು ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

**ಸಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿಅಸ್ಕರ್ ರಸ್ತೆ, ಬೆಂಗಳೂರು-52**

ಸಂಖ್ಯೆ:ಆರ್‌ಎಸ್‌ಆರ್/111/ಎಕ್ಸ್‌ಎಂಸಿ/2007-08 ದಿನಾಂಕ:26-04-2008

**ಸುತ್ತೋಲೆ**

ವಿಷಯ :- ಸಹಕಾರ ಸಂಘಗಳಲ್ಲಿ ವಾಹನ ಖರೀದಿ ಹಾಗೂ ವಾಹನ ವಿಲೇವಾರಿ ಬಗ್ಗೆ.

*****

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆಯಡಿ ನೊಂದಣಿಯಾಗಿರುವ ವಿವಿಧ ಸಹಕಾರ ಸಂಘಗಳಿಗೆ/ಬ್ಯಾಂಕುಗಳಿಗೆ/ಸಂಸ್ಥೆಗಳಿಗೆ/ ತಮ್ಮ ದಿನನಿತ್ಯದ ವ್ಯವಹಾರಗಳಿಗಾಗಿ ಹೊಸ ವಾಹನಗಳನ್ನು ಕೊಳ್ಳಲು ಮತ್ತು ಹಳೆ ವಾಹನಗಳನ್ನು ವಿಲೇವಾರಿ ಮಾಡಲು ಕಾಲ ಕಾಲಕ್ಕೆ ಮಾರ್ಗಸೂಚಿಗಳನ್ನು ನೀಡಲಾಗಿತ್ತು. ಸಹಕಾರ ಸಂಸ್ಥೆಗಳು ಸಾರ್ವಜನಿಕ ಸಂಸ್ಥೆಗಳಾಗಿದ್ದು, ಈ ಸಂಸ್ಥೆಗಳಲ್ಲಿ ಸರ್ಕಾರದಲ್ಲಿ ಅನುಸರಿಸುತ್ತಿರುವ ವಾಹನ ಖರೀದಿ ನಿಯಮಗಳನ್ನು ಹಾಗೂ ಗರಿಷ್ಠ ಮಿತಿಯನ್ನು ಅನುಸರಿಸುವುದು ಅಪೇಕ್ಷಣೀಯವಾಗಿರುತ್ತದೆ. ಇತ್ತೀಚಿನ ಮಾರ್ಗಸೂಚಿಯಂತೆ ಹೊಸ ವಾಹನಗಳ ಖರೀದಿ ಮತ್ತು ಹಳೆ ವಾಹನಗಳ ವಿಲೇವಾರಿಗಾಗಿ ಅನುಮತಿ ನೀಡಲು ಸಹಕಾರ ಸಂಘಗಳ ನಿಬಂಧಕರಿಗೆ ಅಧಿಕಾರವಿತ್ತು. ಆದರೆ ಹೊಸ ವಾಹನಗಳನ್ನು ಕೊಳ್ಳುವ ಬಹುತೇಕ ಸಹಕಾರ ಸಂಸ್ಥೆಗಳು ಲಾಭದಲ್ಲಿ ನಡೆಯುತ್ತಿರುವುದನ್ನು ಮನಗಂಡು, ಈ ಕುರಿತು ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.

I ಹೊಸ ವಾಹನ ಖರೀದಿ

1) ಸಿಂಚಿತ ನಷ್ಟದಲ್ಲಿ ಇಲ್ಲದ ಹಾಗೂ ಸತತವಾಗಿ 5 ವರ್ಷಗಳಿಂದ ಲಾಭದಲ್ಲಿ ನಡೆಯುತ್ತಿರುವ ಸಹಕಾರ ಸಂಸ್ಥೆಗಳು ನಿಬಂಧಕರ ಕಛೇರಿಗೆ ಪ್ರಸ್ತಾವನೆ ಸಲ್ಲಿಸದೇ, ಅವಶ್ಯವಿದ್ದಲ್ಲಿ ಈ ಕೆಳಕಂಡ ಆಡಳಿತ ಮಂಡಳಿ ಅನುಮೋದನೆಯೊಂದಿಗೆ ವಾಹನ ಖರೀದಿಸಬಹುದು.
2) ಕ್ರಮ ಸಂಖ್ಯೆ.1ರಲ್ಲಿ ನಮೂದಿಸಿದ ಸಂಖ್ಯೆಗಿಂತ ಹೆಚ್ಚಿನ ವಾಹನಗಳನ್ನು ಖರೀದಿಸಲು ಇಚ್ಛಿಸುವ ಅಥವಾ ಮೇಲೆ ನಮೂದಿಸಿದಂತೆ ಕನಿಷ್ಠ ಪ್ರಮಾಣದ ಲಾಭ ಗಳಿಸದೇ ಇರುವ ಹಾಗೂ ಕ್ರಮ ಸಂಖ್ಯೆ.1ರಲ್ಲಿ ನಮೂದಾಗದೇ ಇರುವ ಎಲ್ಲಾ ಇತರೆ ಸಹಕಾರ ಸಂಸ್ಥೆಗಳು ವಾಹನ ಖರೀದಿಸಬೇಕಾದಲ್ಲಿ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿಯನ್ನು ಪಡೆದು ಖರೀದಿಸತಕ್ಕದ್ದು.
3) ಮೇಲೆ ವಿವರಿಸಿದಂತೆ ಹೊಸ ವಾಹನಗಳನ್ನು ಕೊಳ್ಳಲು ಪ್ರಚಲಿತವಿರುವ ವಾಹನ ಖರೀದಿ ನಿಯಮಗಳನ್ನು ಆಧರಿಸಿ ಖರೀದಿಸತಕ್ಕದ್ದು.

4) ಉಳಿದ ಅಂಶಗಳಿಗೆ ಕುರಿತಂತೆ ಸಂ.ಆರ್‌ಎಸ್‌ಆರ್/111/ಎಕ್ಸ್‌ಎಂಸಿ/2007–08, ದಿನಾಂಕ:29–10–2007 ಸುತ್ತೋಲೆಯಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸುವುದರೊಂದಿಗೆ ಸಂಘದ ಕಾರ್ಯವ್ಯಾಪ್ತಿ ಹೊರಗಡೆ ಪ್ರವಾಸ ಮಾಡಬೇಕಾದ ಸಂದರ್ಭಗಳಲ್ಲಿ ವಿಶೇಷವಾಗಿ ಬೆಂಗಳೂರು ಪ್ರವಾಸ ಮಾಡಿದರೆ ಸ್ವಂತ ವಾಹನದಲ್ಲಿ ಪ್ರಯಾಣಿಸುವುದನ್ನು ನಿರ್ಬಂಧಿಸಿಕೊಳ್ಳತಕ್ಕದ್ದು. ಸಹಕಾರಿ ಸಂಸ್ಥೆಯ ಅಧ್ಯಕ್ಷರು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಹಾಗೂ ಇತರೆ ಅಧಿಕಾರಿಗಳು ಸಂಸ್ಥೆಯ ವಾಹನವನ್ನು ಸಂಸ್ಥೆಯ ವ್ಯವಹಾರದ ಹೊರತಾಗಿ ಬೇರೆ ಉದ್ದೇಶಗಳಿಗೆ ಉಪಯೋಗಿಸದಂತೆ ನಿಯಂತ್ರಿಸಿಕೊಳ್ಳತಕ್ಕದ್ದು.

II. ಹಳೆ ವಾಹನಗಳ ವಿಲೇವಾರಿ :

ಹಾಲಿ ಇರುವ ಸುತ್ತೋಲೆಗಳಂತೆ ಹಳೆ ವಾಹನಗಳ ವಿಲೇವಾರಿ ಬಗ್ಗೆ ಸಹಕಾರ ಸಂಘಗಳ ನಿಬಂಧಕರ ಅನುಮತಿಯನ್ನು ಪಡೆಯಬೇಕಾಗಿದೆ. ಆದರೆ ಸದರಿ ಸುತ್ತೋಲೆಗಳನ್ನು ಹಿಂತೆಗೆದುಕೊಂಡು ಹಳೇ ವಾಹನಗಳ ಮಾರಾಟ/ವಿಲೇವಾರಿಗೆ ಈ ಕೆಳಕಂಡ ವಿಧಾನವನ್ನು ಅನುಸರಿಸಲು ತಿಳಿಸಲಾಗಿದೆ.

1) ವರಮಾನ ತೆರಿಗೆ ಕಾಯ್ದೆ ಅನ್ವಯ ವಾಹನಗಳಿಗೆ ಸವಕಳಿ (Depreciation Fund) ತೆಗೆದಿರಿಸಿದ ಸಹಕಾರ ಸಂಘಗಳ ಸವಕಳಿ ತೆಗೆದು ವಾಹನ ಬೆಲೆ Book Value ಶೂನ್ಯವಾದ ಅಥವಾ ಶೂನ್ಯಕ್ಕೆ ಹತ್ತಿರ ಅಂದರೆ ರೂ.1,000/– ಒಳಗೆ ಇದ್ದಲ್ಲಿ ವಾಹನ ವಿಲೇವಾರಿ ಅಗತ್ಯವೆಂದು ಕಂಡುಬಂದಲ್ಲಿ ವಾಹನಗಳಲ್ಲಿ ಪಾರದರ್ಶಕ ಕಾಯ್ದೆಯಲ್ಲಿ ಹೇಳಿರುವ ಅಂಶಗಳನ್ನು ಅನುಸರಿಸಿ ನಿಬಂಧಕರ ಅನುಮೋದನೆ ಇಲ್ಲದೆಯೇ ವಿಲೇವಾರಿ ಮಾಡಲು ಕ್ರಮವಿಡಬಹುದಾಗಿದೆ.
2) ವಾಹನ ಬೆಲೆಗೆ ಅಗತ್ಯವಾದಷ್ಟು ಸವಕಳಿ ನಿಧಿ ತೆಗೆದಿರಿಸುವ ಮೊದಲೇ ವಾಹನವನ್ನು ವಿಲೇವಾರಿ ಮಾಡಬೇಕಾದ ಸನ್ನಿವೇಶಗಳು ಉಂಟಾದಲ್ಲಿ ಈ ಬಗ್ಗೆ ಸಹಕಾರ ಸಂಘಗಳ ನಿಬಂಧಕರಿಂದ ಪೂರ್ವಾನುಮತಿ ಪಡೆದು ವಿಲೇವಾರಿ ಮಾಡತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
**ಸಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿಅಸ್ಕರ್ ರಸ್ತೆ, ಬೆಂಗಳೂರು-52**

ಸಂಖ್ಯೆ:ಆರ್‌ಎಸ್‌ಆರ್/111/ಎಕ್ಸ್‌ಎಂಸಿ/2007-08 ದಿನಾಂಕ:26-04-2008

**ಸುತ್ತೋಲೆ**

ವಿಷಯ :- ಸಹಕಾರ ಸಂಘಗಳಲ್ಲಿ ವಾಹನ ಖರೀದಿ ಹಾಗೂ ವಾಹನ ವಿಲೇವಾರಿ ಬಗ್ಗೆ.

*****

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆಯಡಿ ನೊಂದಣಿಯಾಗಿರುವ ವಿವಿಧ ಸಹಕಾರ ಸಂಘಗಳಿಗೆ/ಬ್ಯಾಂಕುಗಳಿಗೆ/ಸಂಸ್ಥೆಗಳಿಗೆ/ ತಮ್ಮ ದಿನನಿತ್ಯದ ವ್ಯವಹಾರಗಳಿಗಾಗಿ ಹೊಸ ವಾಹನಗಳನ್ನು ಕೊಳ್ಳಲು ಮತ್ತು ಹಳೆ ವಾಹನಗಳನ್ನು ವಿಲೇವಾರಿ ಮಾಡಲು ಕಾಲ ಕಾಲಕ್ಕೆ ಮಾರ್ಗಸೂಚಿಗಳನ್ನು ನೀಡಲಾಗಿತ್ತು. ಸಹಕಾರ ಸಂಸ್ಥೆಗಳು ಸಾರ್ವಜನಿಕ ಸಂಸ್ಥೆಗಳಾಗಿದ್ದು, ಈ ಸಂಸ್ಥೆಗಳಲ್ಲಿ ಸರ್ಕಾರದಲ್ಲಿ ಅನುಸರಿಸುತ್ತಿರುವ ವಾಹನ ಖರೀದಿ ನಿಯಮಗಳನ್ನು ಹಾಗೂ ಗರಿಷ್ಠ ಮಿತಿಯನ್ನು ಅನುಸರಿಸುವುದು ಅಪೇಕ್ಷಣೀಯವಾಗಿರುತ್ತದೆ. ಇತ್ತೀಚಿನ ಮಾರ್ಗಸೂಚಿಯಂತೆ ಹೊಸ ವಾಹನಗಳ ಖರೀದಿ ಮತ್ತು ಹಳೆ ವಾಹನಗಳ ವಿಲೇವಾರಿಗಾಗಿ ಅನುಮತಿ ನೀಡಲು ಸಹಕಾರ ಸಂಘಗಳ ನಿಬಂಧಕರಿಗೆ ಅಧಿಕಾರವಿತ್ತು. ಆದರೆ ಹೊಸ ವಾಹನಗಳನ್ನು ಕೊಳ್ಳುವ ಬಹುತೇಕ ಸಹಕಾರ ಸಂಸ್ಥೆಗಳು ಲಾಭದಲ್ಲಿ ನಡೆಯುತ್ತಿರುವುದನ್ನು ಮನಗಂಡು, ಈ ಕುರಿತು ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.

## I **ಹೊಸ ವಾಹನ ಖರೀದಿ:**

1) ಕ್ರೂಢೀಕೃತ ನಷ್ಟದಲ್ಲಿ ಇಲ್ಲದ ಹಾಗೂ ಸತತವಾಗಿ 5 ವರ್ಷಗಳಿಂದ ಲಾಭದಲ್ಲಿ ನಡೆಯುತ್ತಿರುವ ಸಹಕಾರ ಸಂಸ್ಥೆಗಳು ನಿಬಂಧಕರ ಕಛೇರಿಗೆ ಪ್ರಸ್ತಾವನೆ ಸಲ್ಲಿಸದೇ, ಅವಶ್ಯವಿದ್ದಲ್ಲಿ ಈ ಕೆಳಕಂಡ ಆಡಳಿತ ಮಂಡಳಿ ಅನುಮೋದನೆಯೊಂದಿಗೆ ವಾಹನ ಖರೀದಿಸಬಹುದು.

| ಕ್ರಸಂ | ಸಹಕಾರ ಸಂಘಗಳ ವಿಧ | ಹಿಂದಿನ ಸಹಕಾರ ವರ್ಷದಲ್ಲಿ ಗಳಿಸಿದ ಕನಿಷ್ಠ ನಿವ್ವಳ ಲಾಭದ ಮೊತ್ತ | ಖರೀದಿಸಬಹುದಾದ ವಾಹನಗಳ ಸಂಖ್ಯೆ. | ಗರಿಷ್ಠ ಬೆಲೆಯ ಮಿತಿ ಒಂದು ವಾಹನಕ್ಕೆ |
|---|---|---|---|---|
| 1 | 2 | 3 | 4 | 5 |
| ಅ | ರಾಜ್ಯಮಟ್ಟದ ಅಪೆಕ್ಸ್ ಸಹಕಾರ ಸಂಸ್ಥೆಗಳು | ರೂ.2.00 ಕೋಟಿಗೂ ಮೇಲ್ಪಟ್ಟು | ಅಧ್ಯಕ್ಷರ ಹಾಗೂ ವ್ಯವಸ್ಥಾಪಕ ನಿರ್ದೇಶಕರ/ಮುಖ್ಯ | 1) ರೂ.9.00 ಲಕ್ಷ<br>2) ರೂ.6.50 |

| | | | | |
|---|---|---|---|---|
| | | | ಕಾರ್ಯ ನಿರ್ವಹಣಾಧಿಕಾರಿಗಳಿಗೆ ತಲಾ ಒಂದು | ಲಕ್ಷ |
| ಆ | ರಾಜ್ಯಮಟ್ಟದ ಇತರ ಸಹಕಾರ ಸಂಘಗಳು | ರೂ.2.00 ಕೋಟಿಗೂ ಮೇಲ್ಪಟ್ಟು | ಅಧ್ಯಕ್ಷರ ಹಾಗೂ ವ್ಯವಸ್ಥಾಪಕ ನಿರ್ದೇಶಕರ/ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ತಲಾ ಒಂದು | 1) ರೂ.9.00 ಲಕ್ಷ<br>2) ರೂ.6.50 ಲಕ್ಷ |
| ಇ | ಜಿಲ್ಲಾ ಮಟ್ಟಕ್ಕಿಂತ ಹೆಚ್ಚು ಮತ್ತು ರಾಜ್ಯ ಮಟ್ಟಕ್ಕಿಂತ ಕಡಿಮೆ | ರೂ.1.00 ಕೋಟಿಗೂ ಮೇಲ್ಪಟ್ಟು | ಅಧ್ಯಕ್ಷರ ಹಾಗೂ ವ್ಯವಸ್ಥಾಪಕರ ನಿರ್ದೇಶಕರ/ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ತಲಾ ಒಂದು | 1) ರೂ.6.50 ಲಕ್ಷ<br>2) ರೂ.5.00 ಲಕ್ಷ |
| ಈ | ಜಿಲ್ಲಾ ಮಟ್ಟದ ಡಿಸಿಸಿ ಬ್ಯಾಂಕುಗಳು ಇತರೆ ಸಹಕಾರ ಸಮಘಗಳು ಹಾಲು ಒಕ್ಕೂಟಗಳು ಎಣ್ಣೆ ಬೀಜ ಒಕ್ಕೂಟಗಳು | ರೂ.50.00 ಲಕ್ಷಕ್ಕೂ ಮೇಲ್ಪಟ್ಟು | ಅಧ್ಯಕ್ಷರ ಹಾಗೂ ವ್ಯವಸ್ಥಾಪಕ ನಿರ್ದೇಶಕರ/ಮುಖ್ಯ ಕಾರ್ಯ ನಿರ್ವಹನಾಧಿಕಾರಿಗಳಿಗೆ ತಲಾ ಒಂದು | 1) ರೂ.6.50 ಲಕ್ಷ<br>2) ರೂ.5.00 ಲಕ್ಷ |
| ಉ | ಪಟ್ಟಣ ಸಹಕಾರ ಬ್ಯಾಂಕುಗಳು | ರೂ.50.00 ಲಕ್ಷಕ್ಕೂ ಮೇಲ್ಪಟ್ಟು | ಸಾಲ ವಸೂಲಾತಿಗಾಗಿ ಒಂದು ವಾಹನ | ರೂ.5.00 ಲಕ್ಷ |

ಇದೂ ಅಲ್ಲದೆ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಐದು ಲಕ್ಷ ರೂಗಳ ಮಿತಿಗೊಳಪಟ್ಟು ಸಾಲ ವಸೂಲಾತಿಗೆ ಒಂದು ವಾಹನ ಖರೀದಿಸಬಹುದು.

2) ಕ್ರಮ ಸಂಖ್ಯೆ.1ರಲ್ಲಿ ನಮೂದಿಸಿದ ಸಂಖ್ಯೆಗಿಂತ ಹೆಚ್ಚಿನ ವಾಹನಗಳನ್ನು ಖರೀದಿಸಲು ಇಚ್ಛಿಸುವ ಅಥವಾ ಮೇಲೆ ನಮೂದಿಸಿದಂತೆ ಕನಿಷ್ಠ ಪ್ರಮಾಣದ ಲಾಭ ಗಳಿಸದೇ ಇರುವ ಹಾಗೂ ಕ್ರಮ ಸಂಖ್ಯೆ.1ರಲ್ಲಿ ನಮೂದಾಗದೇ ಇರುವ ಎಲ್ಲಾ ಇತರೆ ಸಹಕಾರ ಸಂಸ್ಥೆಗಳು ವಾಹನ ಖರೀದಿಸಬೇಕಾದಲ್ಲಿ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿಯನ್ನು ಪಡೆದು ಖರೀದಿಸತಕ್ಕದ್ದು.
3) ಮೇಲೆ ವಿವರಿಸಿದಂತೆ ಹೊಸ ವಾಹನಗಳನ್ನು ಕೊಳ್ಳಲು ಪ್ರಚಲಿತವಿರುವ ವಾಹನ ಖರೀದಿ ನಿಯಮಗಳನ್ನು ಆಧರಿಸಿ ಖರೀದಿಸತಕ್ಕದ್ದು.
4) ಉಳಿದ ಅಂಶಗಳಿಗೆ ಕುರಿತಂತೆ ಸಂ.ಆರ್‌ಎಸ್‌ಆರ್/111/ಎಕ್ಸ್‌ಎಂಸಿ/2007–08, ದಿನಾಂಕ:29–10–2007 ಸುತ್ತೋಲೆಯಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸುವುದರೊಂದಿಗೆ ಸಂಘದ ಕಾರ್ಯವ್ಯಾಪ್ತಿ ಹೊರಗಡೆ ಪ್ರವಾಸ ಮಾಡಬೇಕಾದ ಸಂದರ್ಭಗಳಲ್ಲಿ ವಿಶೇಷವಾಗಿ ಬೆಂಗಳೂರು ಪ್ರವಾಸ ಮಾಡಿದರೆ ಸ್ವಂತ ವಾಹನದಲ್ಲಿ ಪ್ರಯಾಣಿಸುವುದನ್ನು ನಿರ್ಬಂಧಿಸಿಕೊಳ್ಳತಕ್ಕದ್ದು. ಸಹಕಾರಿ ಸಂಸ್ಥೆಯ ಅಧ್ಯಕ್ಷರು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಹಾಗೂ ಇತರೆ ಅಧಿಕಾರಿಗಳು ಸಂಸ್ಥೆಯ ವಾಹನವನ್ನು

ಸಂಸ್ಥೆಯ ವ್ಯವಹಾರದ ಹೊರತಾಗಿ ಬೇರೆ ಉದ್ದೇಶಗಳಿಗೆ ಉಪಯೋಗಿಸದಂತೆ ನಿಯಂತ್ರಿಸಿಕೊಳ್ಳತಕ್ಕದ್ದು.

II. ಹಳೆ ವಾಹನಗಳ ವಿಲೇವಾರಿ :

ಹಾಲಿ ಇರುವ ಸುತ್ತೋಲೆಗಳಂತೆ ಹಳೆ ವಾಹನಗಳ ವಿಲೇವಾರಿ ಬಗ್ಗೆ ಸಹಕಾರ ಸಂಘಗಳ ನಿಬಂಧಕರ ಅನುಮತಿಯನ್ನು ಪಡೆಯಬೇಕಾಗಿದೆ. ಆದರೆ ಸದರಿ ಸುತ್ತೋಲೆಗಳನ್ನು ಹಿಂತೆಗೆದುಕೊಂಡು ಹಳೇ ವಾಹನಗಳ ಮಾರಾಟ/ವಿಲೇವಾರಿಗೆ ಈ ಕೆಳಕಂಡ ವಿಧಾನವನ್ನು ಅನುಸರಿಸಲು ತಿಳಿಸಲಾಗಿದೆ.

1) ವರಮಾನ ತೆರಿಗೆ ಕಾಯ್ದೆ ಅನ್ವಯ ವಾಹನಗಳಿಗೆ ಸವಕಳಿ (Depreciation Fund) ತೆಗೆದಿರಿಸಿದ ಸಹಕಾರ ಸಂಘಗಳ ಸವಕಳಿ ತೆಗೆದು ವಾಹನ ಬೆಲೆ Book Value ಶೂನ್ಯವಾದ ಅಥವಾ ಶೂನ್ಯಕ್ಕೆ ಹತ್ತಿರ ಅಂದರೆ ರೂ.1,000/– ಒಳಗೆ ಇದ್ದಲ್ಲಿ ವಾಹನ ವಿಲೇವಾರಿ ಅಗತ್ಯವೆಂದು ಕಂಡುಬಂದಲ್ಲಿ ವಾಹನಗಳಲ್ಲಿ ಪಾರದರ್ಶಕ ಕಾಯ್ದೆಯಲ್ಲಿ ಹೇಳಿರುವ ಅಂಶಗಳನ್ನು ಅನುಸರಿಸಿ ನಿಬಂಧಕರ ಅನುಮೋದನೆ ಇಲ್ಲದೆಯೇ ವಿಲೇವಾರಿ ಮಾಡಲು ಕ್ರಮವಿಡಬಹುದಾಗಿದೆ.
2) ವಾಹನ ಬೆಲೆಗೆ ಅಗತ್ಯವಾದಷ್ಟು ಸವಕಳಿ ನಿಧಿ ತೆಗೆದಿರಿಸುವ ಮೊದಲೇ ವಾಹನವನ್ನು ವಿಲೇವಾರಿ ಮಾಡಬೇಕಾದ ಸನ್ನಿವೇಶಗಳು ಉಂಟಾದಲ್ಲಿ ಈ ಬಗ್ಗೆ ಸಹಕಾರ ಸಂಘಗಳ ನಿಬಂಧಕರಿಂದ ಪೂರ್ವಾನುಮತಿ ಪಡೆದು ವಿಲೇವಾರಿ ಮಾಡತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ,
ಕೇಂದ್ರ ಕಛೇರಿಯ ಎಲ್ಲಾ ಮುಖ್ಯಸರಿಗೆ.

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
**<u>ಸಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿಅಸ್ಕರ್ ರಸ್ತೆ, ಬೆಂಗಳೂರು-52</u>**

ಸಂಖ್ಯೆ:ಆರ್‌ಎಸ್‌ಆರ್/80/ತಾಂಅ/2007-08 ದಿನಾಂಕ:05-11-2007

**<u>ಸುತ್ತೋಲೆ ಸಂಖ್ಯೆ.201</u>**
**<u>ತಿದ್ದುಪಡಿ</u>**

ವಿಷಯ :- ಸಹಕಾರ ಸಂಘಗಳ ಕಟ್ಟಡ ನಿರ್ಮಾಣ, ನಿರ್ವಹಣೆ ಕಟ್ಟಡ/ನಿವೇಶನ ಖರೀದಿ ಬಗ್ಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮತಿ ನೀಡುವ ಬಗ್ಗೆ ಮಾರ್ಗಸೂಚಿಗಳು.
ಉಲ್ಲೇಖ :- ದಿನಾಂಕ:29-9-2007ರ ಇದೇ ಕ್ರಮಾಂಕದ ಈ ಕಛೇರಿ ಸುತ್ತೋಲೆ ಸಂಖ್ಯೆ.201.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಗೆ ಲಗತ್ತಿಸಿರುವ ಆಡಳಿತಾತ್ಮಕ ಅನುಮತಿ ನೀಡುವ ಅಧಿಕಾರಿಗಳ ವರ್ಗೀಕರಣದ ತ:ಖ್ತೆಯಲ್ಲಿ ಕ್ರಮಾಂಕ.5ರ ನಂತರ ಕ್ರಮಾಂಕ.5'ಎ' ಆಗಿ ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕಾ ಸಹಕಾರ ಸಂಘಗಳು) ರವರನ್ನು ಸೇರ್ಪಡೆ ಮಾಡಿ ಆದೇಶಿಸಲಾಗಿದೆ.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ,

1) ಕೇಂದ್ರ ಕಛೇರಿಯ ಎಲ್ಲಾ ಮುಖ್ಯಸ್ಥರಿಗೆ.
2) ರಾಜ್ಯದ ಎಲ್ಲಾ ಪ್ರಾಂತೀಯ ಜಂಟಿ ನಿಬಂಧಕರಿಗೆ.
3) ಎಲ್ಲಾ ಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಿಗೆ.

**ದಿನಾಂಕ:5-11-2007ರ ತಿದ್ದುಪಡಿ ಸುತ್ತೋಲೆ 201ಕ್ಕೆ ಸಹಕಾರ ಸಂಘಗಳಲ್ಲಿ ಕಟ್ಟಡ ನಿರ್ಮಾಣ, ಕಟ್ಟಡ ನಿವೇಶನ ಖರೀದಿಗೆ ಆಡಳಿತಾತ್ಮಕ ಅನುಮತಿ ನೀಡುವ ಅಧಿಕಾರಿಗಳ ವರ್ಗೀಕರಣ**

| ಕ್ರಸಂ | ಅಧಿಕಾರಿಗಳ ಪದನಾಮ | ಯಾರ ತರಹದ ಸಹಕಾರ ಸಂಘಗಳು | ಕಟ್ಟಡ ಕಟ್ಟಲು ಮತ್ತು ವಿಸ್ತರಣೆ ಅನುಮತಿ | ನಿವೇಶನ ಕೊಳ್ಳಲು ಅನುಮತಿ | ಕಟ್ಟಿದ ಕಟ್ಟಡ ಕೊಳ್ಳುವ ಬಗ್ಗೆ | ನಿವೇಶನ ಕಟ್ಟಡ ಹದ್ದುಬಸ್ತಿನಲ್ಲಿಡಲು ಕಾಂಪೌಂಡ್ ಕಟ್ಟಲು ಮತ್ತು ವಾರ್ಷಿಕ ರಿಪೇರಿ ಇತ್ಯಾದಿಗಳಿಗೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಸಹಾಯಕ ನಿಬಂಧಕರು | ತಾವು ನೊಂದಣಿ ಮಾಡಲು ಅಧಿಕಾರ ಹೊಂದಿದ ಸಹಕಾರ ಸಂಘಗಳಿಗೆ ಸೀಮಿತವಾದಂತೆ | ರೂ.7.50 ಲಕ್ಷದವರೆಗೆ | ರೂ.5.00 ಲಕ್ಷದವರೆಗೆ | ರೂ.7.50 ಲಕ್ಷದವರೆಗೆ | ರೂ.1.00 ಲಕ್ಷದವರೆಗೆ |
| 2 | ಉಪ ನಿಬಂಧಕರು | 1. ತಾವು ನೊಂದಣಿ ಮಾಡಿದ ಸಹಕಾರ ಸಂಘಗಳಿಗೆ ಸೀಮಿತವಾದಂತೆ. | ರೂ.20.00 ಲಕ್ಷದವರೆಗೆ | ರೂ.15.00 ಲಕ್ಷವರೆಗೆ | ರೂ.20.00 ಲಕ್ಷದವರೆಗೆ | ರೂ.3.00 ಲಕ್ಷದವರೆಗೆ |
| | | 2. ಸಹಾಯಕ ನಿಬಂಧಕರು ನೊಂದಣಿ ಮಾಡಿದ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ. | ರೂ.7.50 ಲಕ್ಷ ಮೀರಿ ರೂ.20.00 ಲಕ್ಷದವರೆಗೆ | ರೂ.5.00 ಲಕ್ಷ ಮೀರಿ ರೂ.15.00 ಲಕ್ಷದವರೆಗೆ | ರೂ.7.50 ಲಕ್ಷ ಮೀರಿ ರೂ.20.00 ಲಕ್ಷದವರೆಗೆ | ರೂ.1.00 ಲಕ್ಷ ಮೀರಿ ರೂ.3.00 ಲಕ್ಷದವರೆಗೆ |
| 3 | ಜಂಟಿ ನಿಬಂಧಕರು | 1. ತಾಲ್ಲೂಕಿಗಿಂತ ಹೆಚ್ಚಿಗೆ ವ್ಯಾಪ್ತಿಯುಳ್ಳ ಹಾಗೂ ವಿಭಾಗೀಯ ಮಟ್ಟದವರೆಗಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ | ರೂ.50.00 ಲಕ್ಷದವರೆಗೆ | ರೂ.30.00 ಲಕ್ಷದವರೆಗೆ | ರೂ.50.00 ಲಕ್ಷದವರೆಗೆ | ರೂ.5.00 ಲಕ್ಷದವರೆಗೆ |
| | | 2. ಸಹಾಯಕ ನಿಬಂಧಕರು, ಉಪ ನಿಬಂಧಕರು ನೊಂದಣಿ ಮಾಡಿದ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ. | ರೂ.20.00 ಲಕ್ಷಕ್ಕೆ ಮೀರಿ ರೂ.50.00 ಲಕ್ಷದವರೆಗೆ | ರೂ.15.00 ಲಕ್ಷ ಮೀರಿ ರೂ.30.00 ಲಕ್ಷದವರೆಗೆ | ರೂ.20.00 ಲಕ್ಷ ಮೀರಿ ರೂ.50.00 ಲಕ್ಷದವರೆಗೆ | ರೂ.3.00 ಲಕ್ಷ ಮೀರಿ ರೂ.5.00 ಲಕ್ಷದವರೆಗೆ |
| 4 | ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) | ಗ್ರಾಹಕ, ಮಾರಾಟ, ಸಂಸ್ಕರಣ, ಕೃಷಿ ಮತ್ತು ಎಣ್ಣೆ ಕಾಳುಗಳ ಸಹಕಾರ ಸಂಘ ಸಂಸ್ಥೆಗಳು. 1. ವಿಭಾಗೀಯ ಮಟ್ಟದ ವರೆಗಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಹಾಗೂ ರಾಜ್ಯ ಅಪೆಕ್ಸ್ ಸಂಘಗಳು | ರೂ1.00 ಕೋಟಿ ವರೆಗೆ | ರೂ.40.00 ಲಕ್ಷದವರೆಗೆ | ರೂ.1.00 ಕೋಟಿವರೆಗೆ | ರೂ.10.00 ಲಕ್ಷದವರೆಗೆ |

| | | | | | | |
|---|---|---|---|---|---|---|
| | | ಸಹಿತ. | | | | |
| | | 2. ಸಹಾಯಕ ನಿಬಂಧಕರು, ಉಪ ನಿಬಂಧಕರು ಹಾಗೂ ಜಂಟಿ ನಿಬಂಧಕರು ನೊಂದಣಿ ಮಾಡಿದ ಹಾಗೂ ವಿಭಾಗೀಯ ಮಟ್ಟದವರೆಗಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತಹ ಸಂಘಗಳಿಗೆ. | ರೂ.30.00 ಲಕ್ಷಕ್ಕೆ ಮೇಲ್ಪಟ್ಟು ರೂ.1.00 ಕೋಟಿ ವರೆಗೆ | ರೂ.30.00 ಲಕ್ಷಕ್ಕೆ ಮೇಲ್ಪಟ್ಟು ರೂ.40.00 ಲಕ್ಷದವರೆಗೆ | ರೂ.50.00 ಲಕ್ಷಕ್ಕೆ ಮೇಲ್ಪಟ್ಟು ರೂ.1.00 ಕೋಟಿ ವರೆಗೆ | ರೂ.5.00 ಲಕ್ಷಕ್ಕೆ ಮೇಲ್ಪಟ್ಟು ರೂ.10.00 ಲಕ್ಷದವರೆಗೆ |
| 5 | ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಇತರೆ) | ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಇವರಿಗೆ ಹಂಚಿಕೆ ಮಾಡಿರುವ ಸಂಘ/ಸಂಸ್ಥೆಗಳನ್ನು ಹೊರತುಪಡಿಸಿ ಉಳಿದೆಲ್ಲ ನಮೂನೆಯ ಸಂಘ/ಸಂಸ್ಥೆಗಳು<br>1. ವಿಭಾಗೀಯ ಮಟ್ಟಕ್ಕಿಂತ ಹೆಚ್ಚಿನ ವ್ಯಾಪ್ತಿಯುಳ್ಳ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಹಾಗೂ ಅಪೆಕ್ಸ್ ಸಂಘಗಳು ಸಹಿತ. | ರೂ.1.00 ಕೋಟಿ ವರೆಗೆ | ರೂ.40.00 ಲಕ್ಷದವರೆಗೆ | ರೂ.1.00 ಕೋಟಿವರೆಗೆ | ರೂ.10.00 ಲಕ್ಷದವರೆಗೆ |
| | | 2. ಉಪ ನಿಬಂಧಕರು/ಜಂಟಿ ನಿಬಂಧಕರು ನೊಂದಣಿ ಮಾಡಿದ ಹಾಗೂ ವಿಭಾಗೀಯ ಮಟ್ಟದವರೆಗಿನ ಸಹಕಾರ ಸಮಘಗಳಿಗೆ ಸಂಬಂಧಿಸಿದಂತಹ ಸಂಘಗಳಿಗೆ. | ರೂ.50.00 ಲಕ್ಷಕ್ಕೆ ಮೇಲ್ಪಟ್ಟು 1.00 ಕೋಟಿ ವರೆಗೆ | ರೂ.20.00ಲಕ್ಷಕ್ಕೆ ಮೇಲ್ಪಟ್ಟು ರೂ.40.00 ಲಕ್ಷದವರೆಗೆ | ರೂ.50.00 ಲಕ್ಷಕ್ಕೆ ಮೇಲ್ಪಟ್ಟು 1.00 ಕೋಟಿವರೆಗೆ | ರೂ.5.00 ಲಕ್ಷಕ್ಕೆ ಮೇಲ್ಪಟ್ಟು 10.00 ಲಕ್ಷದವರೆಗೆ |
| 5ಎ | ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕಾ ಸಹಕಾರ ಸಂಘಗಳು) | ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) / (ಕೈಗಾರಿಕೆ ಮತ್ತು ಇತರೆ)<br>ಇವರಿಗೆ ಹಂಚಿಕೆ ಮಾಡಿರುವ ಸಂಘ ಸಂಸ್ಥೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ನಮೂನೆಯ ಸಂಘ/ಸಂಸ್ಥೆಗಳು.<br>1. ವಿಭಾಗೀಯ ಮಟ್ಟಕ್ಕಿಂತ ಹೆಚ್ಚಿನ ವ್ಯಾಪ್ತಿಯುಳ್ಳ ಸಹಕಾರಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಹಾಗೂ | ರೂ.1.00 ಕೋಟಿಯವರೆಗೆ | ರೂ.40.00 ಲಕ್ಷ ವರೆಗೆ | ರೂ.1.00 ಕೋಟಿವರೆಗೆ | ರೂ.10.00 ಲಕ್ಷದವರೆಗ |

| | | | | | | |
|---|---|---|---|---|---|---|
| | | ರಾಜ್ಯ ಅಪೆಕ್ಸ್ ಬ್ಯಾಂಕುಗಳು ಸಹಿತ. | | | | |
| | | 2. ಸಹಾಯಕ ನಿಬಂಧಕರು, ಉಪ ನಿಬಂಧಕರು, ಜಂಟಿ ನಿಬಂಧಕರು ನೊಂದಣಿ ಮಾಡಿದ ಹಾಗೂ ವಿಭಾಗೀಯ ಮಟ್ಟದವರೆಗಿನ ಸಹಕಾರಿ ಸಂಘಗಳಿಗೆ ಸಂಬಂಧಿಸಿದಂತಹ ಸಂಘಗಳಿಗೆ. | ರೂ.50.00 ಲಕ್ಷಕ್ಕೆ ಮೇಲ್ಪಟ್ಟು 1.00 ಕೋಟಿ ವರೆಗೆ | ರೂ.20.00ಲಕ್ಷಕ್ಕೆ ಮೇಲ್ಪಟ್ಟು ರೂ.40.00 ಲಕ್ಷದವರೆಗೆ | ರೂ.50.00 ಲಕ್ಷಕ್ಕೆ ಮೇಲ್ಪಟ್ಟು 1.00 ಕೋಟಿವರೆಗೆ | ರೂ.5.00 ಲಕ್ಷಕ್ಕೆ ಮೇಲ್ಪಟ್ಟು 10.00 ಲಕ್ಷದವರೆಗೆ |
| 6 | ಸಹಕಾರ ಸಂಘಗಳ ನಿಬಂಧಕರು | 1. ರಾಜ್ಯದ ಅಪೆಕ್ಸ್ ಸಂಸ್ಥೆಗಳು ಮತ್ತು ಮಲ್ಟಿ ಯೂನಿಟ್ ಕಾಯ್ದೆಯಲ್ಲಿ ನೊಂದಣಿಯಾದ ಸಹಕಾರ ಸಂಘಗಳು | ರೂ.1.00 ಕೋಟಿ ಮೇಲ್ಪಟ್ಟು | ರೂ.40.00 ಲಕ್ಷಕ್ಕೆ ಮೇಲ್ಪಟ್ಟು | ರೂ.1.00 ಕೋಟಿ ಮೇಲ್ಪಟ್ಟು | ರೂ.10.00 ಲಕ್ಷಕ್ಕೆ ಮೇಲ್ಪಟ್ಟು |
| | | 2. ಸಹಾಯಕ ನಿಬಂಧಕರು, ಉಪ ನಿಬಂಧಕರು ಹಾಗೂ ಜಂಟಿ ನಿಬಂಧಕರು ನೊಂದಣಿ ಮಾಡಿದ್ದು ಅಪರ ನಿಬಂಧಕರ ವ್ಯಾಪ್ತಿಗೆ ಒಳಪಡದ ಇತರೆ ಸಹಕಾರ ಸಂಘಗಳು | | | | |
| | | 3. ವಿಭಾಗೀಯ ಮಟ್ಟಕ್ಕಿಂತ ಹೆಚ್ಚಿನ ವ್ಯಾಪ್ತಿಯುಳ್ಳ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ( ಅಪರ ನಿಬಂಧಕರ ವ್ಯಾಪ್ತಿಗೆ ಒಳಪಡದಂತಹ ಸಂಘಗಳು ಮಾತ್ರ) | | | | |

ಸಹಕಾರ ಸಂಘಗಳ ನಿಬಂಧಕರ
ಕರ್ನಾಟಕ ರಾಜ್ಯ, ಬೆಂಗಳೂರು.

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
**ಸಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿಅಸ್ಕರ್ ರಸ್ತೆ, ಬೆಂಗಳೂರು-52**

ಸಂಖ್ಯೆ:ಆರ್‌ಸಿಎಸ್/80/ತಾಂಅ/2007-08 ದಿನಾಂಕ:29-09-2007

**ಸುತ್ತೋಲೆ ಸಂಖ್ಯೆ.201**

ವಿಷಯ :- ಸಹಕಾರ ಸಂಘಗಳ ಕಟ್ಟಡ ನಿರ್ಮಾಣ, ನಿರ್ವಹಣೆ ಕಟ್ಟಡ/ನಿವೇಶನ ಖರೀದಿ ಬಗ್ಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮತಿ ನೀಡುವ ಬಗ್ಗೆ ಮಾರ್ಗಸೂಚಿಗಳು.

ಉಲ್ಲೇಖ :- 1. ಈ ಕಛೇರಿಯ ದಿನಾಂಕ:17-10-1997 ಸುತ್ತೋಲೆ ಕ್ರ:104/ಜಿಡಿಈ/65/ಜಿಈಟಿ/97-98.
2. ಈ ಕಛೇರಿಯ ದಿನಾಂಕ:11-6-2004ರ ಸುತ್ತೋಲೆ ಕ್ರ:ಓಟಿಎಸ್/256/ಹೆಚ್‌ಓಟಿ/2003-04

*****

ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯನ್ವಯ ನೋಂದಣಿಯಾಗಿರುವ ವಿವಿಧ ಮಾದರಿಯ ಸಹಕಾರ ಸಂಘಗಳು / ಬ್ಯಾಂಕುಗಳು / ಸಂಸ್ಥೆಗಳು ಸ್ವಂತ ಕಟ್ಟಡ / ನಿವೇಶನ ಹೊಂದಲು, ನಿವೇಶನ / ಕಟ್ಟಡ ಖರೀದಿ, ಕಟ್ಟಡ ವಿಸ್ತರಣೆ, ನಿವೇಶನ / ಕಟ್ಟಡ ನಿರ್ವಹಣೆ, ಕಾಂಪೌಂಡ್ ಕಟ್ಟಲು, ದುರಸ್ತಿ ಇತ್ಯಾದಿ ಕಾಮಗಾರಿಗಳಿಗೆ ಆಡಳಿತಾತ್ಮಕ / ತಾಂತ್ರಿಕ ಅನುಮತಿ ನೀಡಲು ಮಾರ್ಗಸೂಚಿಗಳನ್ನು ಮತ್ತು ಇಲಾಖೆಯ ವಿವಿಧ ಹಂತದ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ಉಲ್ಲೇಖಿತ ಸುತ್ತೋಲೆಗಳಲ್ಲಿ ಮಾಡಲಾಗಿದೆ.

ಪ್ರಸ್ತುತ ಕಟ್ಟಡ ನಿರ್ಮಾಣದ ವೆಚ್ಚ ಅಧಿಕವಾಗುತ್ತಿರುವ ಹಿನ್ನೆಲೆಯಲ್ಲಿ ಇಲಾಖಾಧಿಕಾರಿಗಳಿಗೆ ಆಡಳಿತಾತ್ಮಕ ಅನುಮತಿ ನೀಡಲು, ನೀಡಿರುವ ಅಧಿಕಾರವನ್ನು ಪುನರ್ ವಿಮರ್ಶಿಸಲಾಗಿದೆ ಹಾಗೂ ಇಂತಹ ಅನುಮತಿ ನೀಡಲು ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಲಾಗಿದೆ.

1. ತಾಂತ್ರಿಕ ಅನುಮತಿ :-

ಉದ್ದೇಶಿತ ಕಟ್ಟಡ ಕಾಮಗಾರಿಯ ಅಂದಾಜು ವೆಚ್ಚದ ಪಟ್ಟಿ ಮತ್ತು ನಕ್ಷೆಯನ್ನು ಸಂಸ್ಥೆಯ ಕಾರ್ಯವ್ಯಾಪ್ತಿಯ ಲೋಕೋಪಯೋಗಿ / ಪಂಚಾಯತ್ ರಾಜ್ / ನಗರಸಭೆ / ಮುನಿಸಿಪಾಲಿಟಿ ಇಂಜಿನಿಯರಿಂಗ್ ವಿಭಾಗದ ಅಭಿಯಂತರರಿಂದ ತಾಂತ್ರಿಕವಾಗಿ ಪರಿಶೀಲಿಸಿ ದೃಢೀಕರಿಸಲ್ಪಟ್ಟಿರುವುದನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ ಚಾಲ್ತಿ ವರ್ಷದ ಲೋಕೋಪಯೋಗಿ ಇಲಾಖೆಯ ಎಸ್.ಆರ್.ದರಗಳಿಗನುಗುಣವಾಗಿರಬೇಕು. ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಮೊದಲು ಸ್ಥಳೀಯ ಸಕ್ರಮ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ಮಂಜೂರಾತಿ ಪಡೆಯಬೇಕು. ಕಟ್ಟಡ ಖರೀದಿಸುವಾಗ ಇದರ ಜೊತೆಗೆ ಆಸ್ತಿ ಮೌಲ್ಯಮಾಪನವನ್ನು

ಕಾರ್ಯವ್ಯಾಪ್ತಿಯ ಲೋಕೋಪಯೋಗಿ / ಪಂಚಾಯತ್ ರಾಜ್ / ನಗರ ಸಭೆ / ಮುನಿಸಿಪಾಲಿಟಿ ಅಭಿಯಂತರರಿಂದ ಪಡೆಯಬೇಕು.

2. ಆಡಳಿತಾತ್ಮಕ ಅನುಮತಿ :–

ಕ್ರಮಾಂಕ(1)ರಲ್ಲಿ ನಮೂದಿಸಿರುವ ವಿವರಗಳು ಮತ್ತು ಸಂಬಂಧಿಸಿದ ದಾಖಲೆಗಳ ಜೊತೆಗೆ ಕೆಳಕಂಡ ಅಂಶಗಳನ್ನು ಆಡಳಿತಾತ್ಮಕ ಮಂಜೂರಾತಿ ನೀಡುವಾಗ ಪರಿಶೀಲಿಸಿ ಪರಿಗಣಿಸತಕ್ಕದು.

1) ಕಟ್ಟಡ ನಿರ್ಮಾಣದ ಉದ್ದೇಶ ಹಾಗೂ ಇದು ಸಂಘದ ಕಾರ್ಯೋದ್ದೇಶಗಳಿಗೆ ಪೂರಕವಾಗಿರುವ ಬಗ್ಗೆ.
2) ಉದ್ದೇಶಿತ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಲು ಸಾಕಷ್ಟು ಸಂಪನ್ಮೂಲದ ಲಭ್ಯತೆ ಇರುವುದನ್ನು ಖಚಿತಪಡಿಸಬೇಕು ಹಾಗೂ ಯಾವುದೇ ಹೆಚ್ಚುವರಿ ವೆಚ್ಚ ಮಾಡತಕ್ಕದ್ದಲ್ಲ.
3) ತಾಂತ್ರಿಕ ತಜ್ಞರನ್ನು ಸಂಘವೇ ನೇಮಿಸಿಕೊಳ್ಳಬೇಕು. ಅವರಿಗೆ ಕೊಡತಕ್ಕ ಸಂಭಾವನೆಯ ಶುಲ್ಕವನ್ನು ಸಂಘದ ಹಿತಕ್ಕೆ ಪೂರಕವಾಗಿರುವಂತೆ ನಿಗಧಿಪಡಿಸಿಕೊಳ್ಳಬೇಕು.
4) ಸಕ್ಷಮ ಪ್ರಾಧಿಕಾರವು ಆಡಳಿತಾತ್ಮಕ ಮಂಜೂರಾತಿ ನೀಡಬೇಕು.

3. ಆಡಳಿತಾತ್ಮಕ ಅನುಮೋದನೆ ಸಕ್ಷಮ ಪ್ರಾಧಿಕಾರ :

1) ಕ್ರೋಢೀಕೃತ ನಷ್ಟ ಇಲ್ಲದಂತಹ ಸಹಕಾರ ಸಂಸ್ಥೆಗಳು ಸ್ವಂತ, ಕಟ್ಟಡ ನಿಧಿ ಹೊಂದಿದ್ದು ಹಾಗೂ ಸದಸ್ಯರಿಂದ ಈ ಕುರಿತು ಪಡೆದ ವಂತಿಕೆಯಿಂದ ಕೈಗೊಳ್ಳುವ ಕಟ್ಟಡ ನಿರ್ಮಾಣ / ಖರೀದಿ, ಕಟ್ಟಡ ವಿಸ್ತರಣೆ / ಕಟ್ಟಡ ನಿರ್ವಹಣೆ, ಕಾಂಪೌಂಡ್ ನಿರ್ಮಾಣ, ನಿವೇಶನ ಖರೀದಿ, ದುರಸ್ತಿ ಇತ್ಯಾದಿ ಪ್ರಕರಣಗಳಲ್ಲಿ ಇಲಾಖೆಯ ಆಡಳಿತಾತ್ಮಕ ಅನುಮತಿ ಅಗತ್ಯವಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಆಡಳಿತ ಮಂಡಳಿ ಪರಿಶೀಲಿಸಿ ಸೂಕ್ತ ನಿರ್ಣಯ ಕೈಗೊಳ್ಳುವುದು ಅಂದರೆ ಇಂತಹ ಪ್ರಕರಣಗಳಲ್ಲಿ ಆಡಳಿತ ಮಂಡಳಿಗೆ ಆಡಳಿತಾತ್ಮಕ ಅನುಮತಿ ಕೊಡಲು ಅಧಿಕಾರವಿರುತ್ತದೆ.
2) ಆಪದ್ಧನ ನಿಧಿಯಿಂದ ಹಾಗೂ ಇತರೆ ಸಂಬಂಧಿಸಿದ ನಿಧಿಗಳಿಂದ ಲಾಭಾಂಶವನ್ನು ಮಹಾ ಸಭೆಯಲ್ಲಿ ಕಟ್ಟಡ ನಿಧಿಗೆ ವರ್ಗಾಯಿಸಿ ಕಟ್ಟಡ ನಿರ್ಮಾಣ ಕೈಗೊಳ್ಳುವಂತಹ ಪ್ರಕರಣಗಳಲ್ಲಿ ಇಲಾಖಾ ಪೂರ್ವಾನುಮತಿ ಪಡೆಯತಕ್ಕದ್ದು,

ಆಡಳಿತಾತ್ಮಕ ಅನುಮತಿ ನೀಡುವ ಇಲಾಖಾಧಿಕಾರಿಗಳವರ ಅಧಿಕಾರದ ವರ್ಗೀಕರಣವನ್ನು ಲಗತ್ತಿಸಲಾಗಿದೆ.

4. ಟೆಂಡರುಗಳನ್ನು ಮತ್ತು ಕಾಮಗಾರಿಯನ್ನು ವಹಿಸುವಿಕೆ :

ಆಡಳಿತಾತ್ಮಕ ಅನುಮತಿ ಪಡೆದ ನಂತರ ಪ್ರಸ್ತಾವೆಯನ್ನು ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ನಂತರ ಮುಂದಿನ ಕ್ರಮ ಕೈಗೊಳ್ಳಬೇಕು.

ಪಾರದರ್ಶಕ ಕಾಯಿದೆಯನ್ನು ಅನುಸರಿಸಿ, ಲೋಕೋಪಯೋಗಿ ಇಲಾಖೆಯ ಕಾರ್ಯ ವಿಧಾನದಂತೆ ಕಾಮಗಾರಿಯನ್ನು ವಹಿಸಿಕೊಡಬೇಕು, ಅಂದಾಜು ವೆಚ್ಚ ರೂ.5.00 ಲಕ್ಷದ ವರೆಗೆ ಇದ್ದಲ್ಲಿ ಟೆಂಡರುಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಅನುಮೋದಿಸಲ್ಪಟ್ಟ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಬೇಕು ಹಾಗೂ ಅಂದಾಜು ವೆಚ್ಚ ರೂ.5.00 ಲಕ್ಷಕ್ಕೆ ಮೇಲ್ಪಟ್ಟಿದ್ದಲ್ಲಿ ಟೆಂಡರ್ ಗಳನ್ನು ರಾಜ್ಯಮಟ್ಟದ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಿಸಬೇಕು, ಗುತ್ತಿಗೆದಾರರಿಂದ ಟೆಂಡರ್ ಗಳನ್ನು ಸ್ವೀಕರಿಸಿದ ನಂತರ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬೇಕು.

ಕಾಮಗಾರಿಗಳಿಗೆ ಟೆಂಡರುಗಳನ್ನು ಅಹ್ವಾನಿಸಿದಾಗ ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಟೆಂಡರ್ ಪ್ರೀಮಿಯಮ್ ಶೇ.10 ಕ್ಕಿಂತ ಹೆಚ್ಚಿಗೆ ಆದಲ್ಲಿ ಸದರಿ ಕಾಮಗಾರಿಗೆ ಅಂದಾಜು ಪಟ್ಟಿಗೆ ತಾಂತ್ರಿಕ ಪರಿಶೀಲನೆ ನಡೆಸಿ ದೃಢೀಕರಿಸಿದ ಪ್ರಾಧಿಕಾರದ ಅಭಿಯಂತರರ ಒಪ್ಪಿಗೆಗೆ ಸಲ್ಲಿಸಬೇಕು.

ಪ್ರತಿಯೊಂದು ಕಾಮಗಾರಿಯು ಪೂರ್ಣಗೊಂಡ ನಂತರ ದೃಢೀಕರಣ ಪತ್ರವನ್ನು ಸಂಬಂಧಿಸಿದ ತಾಂತ್ರಿಕತಜ್ಞರಿಂದ ಪಡೆದು ಸಂಬಂಧಿಸಿದ ದೃಢೀಕೃತ ಅಳತೆ ಪುಸ್ತಕಗಳ ಹಾಗೂ ಅಂತಿಮ ಬಿಲ್ಲುಗಳ ಪ್ರತಿಗಳೊಂದಿಗೆ ಆಡಳಿತಾತ್ಮಕ ಅನುಮತಿ ನೀಡಿದ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಮೂಲ ದಾಖಲೆಗಳನ್ನು ಸಂಘದಲ್ಲಿಯೇ ನಿರ್ವಹಿಸಬೇಕು.

5. ನಿರ್ಬಂಧ :

ಸಹಕಾರ ಸಂಸ್ಥೆಗಳು ದುಡಿಯುವ ಬಂಡವಾಳವನ್ನು ಉಪಯೋಗಿಸಿಕೊಂಡು ಕಟ್ಟಡಗಳನ್ನು ನಿರ್ಮಿಸಬಾರದು.

ಈ ಸುತ್ತೋಲೆ ನಿರ್ದೇಶನಗಳನ್ನು ಸಂಬಂಧಿಸಿದ ಸಹಕಾರ ಸಂಸ್ಥೆಗಳು ಹಾಗೂ ಎಲ್ಲಾ ಇಲಾಖಾಧಿಕಾರಿಗಳು ತಪ್ಪದೇ ಅನುಸರಿಸತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

**ಕರ್ನಾಟಕ ಸರ್ಕಾರ**

ಸಂಖ್ಯೆ: :ಸಿಎಂಡಬ್ಲ್ಯೂ/182/ಸಿಎಲ್‌ಎಂ/2004 ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:8-12-2004

## ಸುತ್ತೋಲೆ

ವಿಷಯ :- ಸಹಕಾರ ಸಂಘಗಳ ಪ್ರಸ್ತಾವಗಳಿಗೆ ಆಡಳಿತಾತ್ಮಕ ಅನುಮತಿ ನೀಡುವ ಬಗ್ಗೆ.

*****

ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ಮತ್ತು ಸಹಕಾರ ಇಲಾಖೆಯು ಕಾಲ ಕಾಲಕ್ಕೆ ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳ ಪ್ರಕಾರ ಸಹಕಾರ ಸಂಘ/ಸಂಸ್ಥೆಗಳು ತಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಸಹಕಾರ ಇಲಾಖೆಯಿಂದ ಆಡಳಿತಾತ್ಮಕ ಅನುಮತಿ ಮತ್ತು ಮಂಜೂರಾತಿ ಪಡೆಯುತ್ತಿರುವುದು ಸರಿಯಷ್ಟೆ. ಸಹಕಾರ ಸಂಘಗಳ ನಿಬಂಧಕರು ಹಲವಾರು ಸುತ್ತೋಲೆಗಳನ್ನು ಹೊರಡಿಸಿ ಸಂಬಂಧಪಟ್ಟ ವಿಷಯಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಪ್ರಾಂತ್ಯ ಮಟ್ಟದ ಅಧಿಕಾರಿಗಳಿಂದ ಮತ್ತು ಸಹಕಾರ ಸಂಘಗಳ ನಿಬಂಧಕರಿಂದ ಅನುಮತಿ ಅಥವಾ ಮಂಜೂರಾತಿ ಪಡೆಯಬೇಕೆಂದು ಸೂಚಿಸಿರುತ್ತಾರೆ. ಆದರೂ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದ ಪ್ರಸ್ತಾವೆಗಳು ಸರ್ಕಾರದ ಅನುಮೋದನೆಗೆ ಬರುತ್ತಿವೆ. ಸಹಕಾರ ಸಂಸ್ಥೆಗಳು ಸಲ್ಲಿಸುವ ಪ್ರಸ್ತಾವೆಗಳನ್ನು ವಿಳಂಬವಿಲ್ಲದೆ ಶೀಘ್ರವಾಗಿ ಪರಿಗಣಿಸಿ ಅಗತ್ಯ ಅನುಮತಿ / ಮಂಜೂರಾತಿ ಕೊಡುವ ಹಿತದೃಷ್ಟಿಯಿಂದ ಈ ಕೆಳಕಂಡಂತೆ ಸೂಚನೆಗಳನ್ನು ನೀಡಿದೆ.

1. ಆಡಳಿತ ಸಮಿತಿಯ ಸದಸ್ಯರ ಪ್ರವಾಸದ ಅನುಮತಿ

ಅ) ಯಾವುದೇ ಸಹಕಾರ ಸಂಸ್ಥೆಯ ಆಡಳಿತ ಸಮಿತಿಯ ಸದಸ್ಯರು ರಾಜ್ಯದ ಒಳಗೆ ಅಥವಾ ರಾಜ್ಯದ ಹೊರಗೆ ಅಧ್ಯಯನ ಪ್ರವಾಸ ಕೈಗೊಳ್ಳಬೇಕಾದಲ್ಲಿ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಪಡೆಯತಕ್ಕದ್ದು. ಆದರೆ ರಾಜ್ಯದ ಹೊರಗಿನ ಪ್ರವಾಸದ ಅವಧಿಯು 10 ದಿನಗಳಿಗಿಂತ ಹೆಚ್ಚಿದ್ದಲ್ಲಿ ಮಾತ್ರ ಸರ್ಕಾರದ ಪೂರ್ವಾನುಮತಿ ಪಡೆಯತಕ್ಕದ್ದು.

ಆ) ಯಾವುದೇ ಸಹಕಾರ ಸಂಸ್ಥೆಯ ಆಡಳಿತ ಸಮಿತಿಯ ಸದಸ್ಯರು ವಿದೇಶ ಪ್ರವಾಸ ಕೈಗೊಳ್ಳಬೇಕಾದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆಯತಕ್ಕದ್ದು. ಆದರೆ ಈ ಬಗ್ಗೆ ಯಾವುದೇ ಕಾರಣಕ್ಕೂ ಘಟನೋತ್ತರ ಅನುಮತಿಯನ್ನು ನೀಡಲಾಗುವುದಿಲ್ಲ.

2. ಹೊಸ ವಾಹನಗಳ ಖರೀದಿ ಮತ್ತು ಹಳೇ ವಾಹನಗಳ ಬಗ್ಗೆ ಸಹಕಾರ ಸಂಘಗಳ ನಿಬಂಧಕರೇ ಸರ್ಕಾರದಲ್ಲಿ ಪ್ರಚಲಿತವಿರುವ ವಾಹನ ಖರೀದಿ ಮತ್ತು ವಿಲೇವಾರಿ ನಿಯಮಗಳನ್ನು ಆಧರಿಸಿ ಅನುಮತಿ ನೀಡತಕ್ಕದ್ದು.

3. ಚರಾಸ್ತಿ/ಸ್ಥಿರಾಸ್ತಿ/ನಿವೇಶನ/ಜಮೀನು/ಕಟ್ಟಡ ಮತ್ತು ಯಂತ್ರೋಪಕರಣ ಖರೀದಿ ಮತ್ತು ವಿಲೇವಾರಿ ಅನುಮತಿ

ಅ) ಸ್ವಂತ ಬಂಡವಾಳದಿಂದ ಚರಾಸ್ತಿ, ಸ್ಥಿರಾಸ್ತಿ, ನಿವೇಶನ, ಜಮೀನು, ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಕೊಂಡುಕೊಳ್ಳುವುದಾದಲ್ಲಿ ಅಥವಾ ಮಾರಾಟ ಮಾಡುವುದಾದಲ್ಲಿ ಸಹಕಾರ ಸಂಘಗಳ ನಿಬಂಧಕರೇ ಅನುಮತಿ ನೀಡತಕ್ಕದ್ದು.

ಆ) ಸರ್ಕಾರದ ಸಾಲ, ಅನುದಾನ ಅಥವಾ ಗ್ಯಾರಂಟಿ ಮೂಲಕ ಚರಾಸ್ಥಿ, ಸ್ಥಿರಾಸ್ಥಿ, ನಿವೇಶನ, ಜಮೀನು, ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಕೊಂಡಿದ್ದು ಸದರಿ ಹಣ ತೀರುವಳಿ ಆಗಿದ್ದಲ್ಲಿ ಅವುಗಳ ವಿಲೇವಾರಿಗೆ ಸಹಕಾರ ಸಂಘಗಳ ನಿಬಂಧಕರೇ ಅನುಮತಿ ನೀಡತಕ್ಕದ್ದು.

ಇ) ಸರ್ಕಾರದ ಸಾಲ, ಅನುದಾನ ಅಥವಾ ಗ್ಯಾರಂಟಿ ಮೂಲಕ ಚರಾಸ್ಥಿ, ಸ್ಥಿರಾಸ್ಥಿ, ನಿವೇಶನ, ಜಮೀನು, ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಕೊಂಡಿದ್ದು ಸರ್ಕಾರದ ಸಾಲ, ಅನುದಾನ ಅಥವಾ ಗ್ಯಾರಂಟಿ ಬಾಕಿ ಉಳಿದಿದ್ದಲ್ಲಿ ಮಾತ್ರ ಇವುಗಳ ವಿಲೇವಾರಿಗೆ ಸರ್ಕಾರದ ಪೂರ್ವಾನುಮತಿ ಪಡೆಯತಕ್ಕದ್ದು.

4. ರಜತ/ಸ್ವರ್ಣ/ವಜ್ರ/ಪ್ಲಾಟಿನಂ/ಶತಮಾನೋತ್ಸವ ಆಚರಿಸಲು ಅನುಮತಿ

ಅ) ಸಹಕಾರ ಸಂಸ್ಥೆಗಳ ಆರ್ಥಿಕ ಸ್ಥಿತಿ ಮತ್ತು ಪ್ರತಿ ಪ್ರಕರಣದ ಅರ್ಹತೆಯನ್ನು ಪರಿಗಣಿಸಿ ಸಹಕಾರ ಸಂಘಗಳ ನಿಬಂಧಕರೇ ಅನುಮತಿ ನೀಡತಕ್ಕದ್ದು. ಆದರೆ ದುಡಿಯುವ ಬಂಡವಾಳದಿಂದ ವೆಚ್ಚ ಮಾಡಲು ಅನುಮತಿ ನೀಡತಕ್ಕದ್ದಲ್ಲ.

ಆ) ಲಾಭದಿಂದ ಸದರಿ ಉದ್ದೇಶಕ್ಕಾಗಿ ತೆಗೆದಿಟ್ಟಿರುವ ನಿಧಿ ಮತ್ತು ಸ್ಮರಣ ಸಂಚಿಕೆಯಲ್ಲಿನ ಜಾಹಿರಾತು / ದೇಣಿಗೆಯಿಂದ ಬಂದ ನಿಧಿಯಿಂದ ಮಾತ್ರ ವೆಚ್ಚ ಮಾಡಲು ಅನುಮತಿ ನೀಡತಕ್ಕದ್ದು.

ಈಗಾಗಲೇ ಸಹಕಾರ ಸಂಘಗಳ ನಿಬಂಧಕರು ಹೊರಡಿಸಿರುವ ಮಾರ್ಗಸೂಚಿಗಳ ಸುತ್ತೋಲೆಗಳನ್ನು ಪಾಲಿಸಿ ಸಹಕಾರ ಸಂಸ್ಥೆಗಳು ಮೇಲ್ಕಂಡ ವಿಷಯಗಳಿಗೆ ಆಡಳಿತಾತ್ಮಕ ಅನುಮತಿ ಮತ್ತು ಮಂಜೂರಾತಿ ಪಡೆಯತಕ್ಕದ್ದು ಎಂದು ಸೂಚಿಸಿದೆ.

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.